೧೯೯೦ನೇ ಇಸವಿಯ ಕರ್ನಾಟಕ ಸ್ಥಳೀಯ ಪ್ರದೇಶದೊಳಗೆ ಬಳಕೆ, ಉಪಯೋಗ ಅಥವಾ ಮಾರಾಟಕ್ಕಾಗಿ ಬರುವ ಸರಕುಗಳ ಮೇಲೆ ತೆರಿಗೆ ವಿಧಿಸುವ (ತಿದ್ದುಪಡಿ) ವಿಧೇಯಕ

೧೯೯೦ನೇ ಇಸವಿಯ ಕರ್ನಾಟಕ ವಿದ್ಯುಚ್ಛಕ್ತಿ (ಬಳಕೆ ಮೇಲೆ ತೆರಿಗೆ)(ತಿದ್ದುಪಡಿ) ವಿಧೇಯಕ

೧೯೯೦ನೇ ಇಸವಿಯ ಕರ್ನಾಟಕ ಸ್ಟ್ಯಾಂಪ್ಸ್ (ತಿದ್ದುಪಡಿ) ವಿಧೇಯಕ

೧೯೯೦ನೇ ಇಸವಿಯ ಕರ್ನಾಟಕ ಸಂಘಗಳ ನೋಂದಣಿ (ತಿದ್ದುಪಡಿ) ವಿಧೇಯಕ

೧೯೯೦ನೇ ಇಸವಿಯ ಕರ್ನಾಟಕ ಮೋಟಾರು ವಾಹನ ತೆರಿಗೆ (ತಿದ್ದುಪಡಿ) ವಿಧೇಯಕ

ಉಪಾಧ್ಯಕ್ಷರ ಚುನಾವಣೆ

ಅಧ್ಯಕ್ಷರು.—ಉಪಾಧ್ಯಕ್ಷ ಸ್ಥಾನಕ್ಕೆ ಹೆಸರನ್ನು ಸೂಚಿಸಿ ಮೂರು ಪ್ರಸ್ತಾವಗಳು ಬಂದಿವೆ. ಮತ್ತು ಎಸ್.ಹೆಚ್. ಕೌಜಲಗಿಯವರ ಹೆಸರಿನ ಒಂದು ಪ್ರಸ್ತಾವ ಬಂದಿದೆ. ಕಾರ್ಯಕ್ರಮದ ಪಟ್ಟಿಯ ಪ್ರಕಾರ ಅವರವರ ಪ್ರಸ್ತಾವಗಳನ್ನು ಸೂಚಿಸಿ ಅವುಗಳನ್ನು ಅನುಮೋದಿಸಿದ ಪ್ರಸ್ತಾವಗಳಿವೆ ಪ್ರಸ್ತಾವಗಳನ್ನು ಮತಕ್ಕೆ ಹಾಕುತ್ತೇನೆ. ಮೊದಲನೆಯ ಪ್ರಸ್ತಾವನ್ನು ಸಭೆಯು ಅಂಗೀಕರಿಸಿದಲ್ಲಿ ಉಳಿದ ಪ್ರಸ್ತಾವಗಳನ್ನು ಮತಕ್ಕೆ ಹಾಕುವುದಿಲ್ಲ. ಶ್ರೀ ವೀರೇಂದ್ರ ಪಾಟೀಲ್ ಅವರು ಸಭೆಯಲ್ಲಿ ಇಲ್ಲ. ಶ್ರೀ ಕೆ. ಹೆಚ್. ಪಾಟೀಲ್ ಅವರು ಹೆಸರನ್ನು ಸೂಚಿಸಬಹುದು.

ಶ್ರೀ ಕೆ. ಹೆಚ್. ಪಾಟೀಲ್.—"ಶ್ರೀಮತಿ ಸಿ. ನಾಗಮ್ಮ ಕೇಶವಮೂರ್ತಿ ಅವರನ್ನು ವಿಧಾನ ಸಭೆಯ ಉಪಾಧ್ಯಕ್ಷಣಿಯವರನ್ನಾಗಿ ಚುನಾಯಿಸಬೇಕೆಂದು ಸೂಚಿಸುತ್ತೇನೆ."

ಶ್ರೀಮತಿ ಚಂದ್ರಪ್ರಭ ಅರಸ್.—ಮಾನ್ಯ ಕೆ.ಹೆಚ್. ಪಾಟೀಲ್‌ರವರು ಸೂಚಿಸಿದ ಪ್ರಸ್ತಾವವನ್ನು ನಾನು ಅನುಮೋದಿಸುತ್ತೇನೆ.

ಅಧ್ಯಕ್ಷರು.—ಶ್ರೀ ಹುಚ್ಚಮಾಸ್ತಿಗೌಡರು ಸಭೆಯಲ್ಲಿ ಇಲ್ಲ. ಶ್ರೀ ಚಿಂದ್ರೇಗೌಡರು ಈಗ ಹೆಸರನ್ನು ಸೂಚಿಸಬಹುದು.

†**ಶ್ರೀ ಡಿ. ಬಿ. ಚಂದ್ರೇಗೌಡ (ವಿರೋಧ ಪಕ್ಷದ ನಾಯಕರು).**—ಮಾನ್ಯ ಸಭಾಧ್ಯಕ್ಷರೇ, ನಾನಂ ಸೂಚನೆಯನ್ನೇನೋ ಕಳಿಸಿದ್ದೇನೆ. ಆದರೆ ಈ ವಿಚಾರದಲ್ಲಿ ಒಂದು ಮಾತನ್ನು ತಮಗೆ ಹೇಳಬೇಕಾದದ್ದು ಇದೆ. ಉಪಾಧ್ಯಕ್ಷರ ಸ್ಥಾನದಂಥ ಗೌರವಯುತವಾದ ಸ್ಥಾನದ ಬಗ್ಗೆ ನಮ್ಮನಮ್ಮಲ್ಲಿ ಭಿನ್ನಾಭಿಪ್ರಾಯಗಳು ಕಾಣಬಾರದು. ಆದರೆ ದುರ್ದೈವದಿಂದ ಕರ್ನಾಟಕ ರಾಜ್ಯದ ವಿಧಾನಸಭೆಯ ಇತಿಹಾಸದಲ್ಲೇ ಮೊದಲ ಬಾರಿಗೆ ಆಳುವ ಪಕ್ಷ ತನ್ನ ಸಂಖ್ಯೆಯೇ ದೊಡ್ಡದು ಎಂದು ಸದನದ ಸದಸ್ಯರ ಸಂಬಂಧವನ್ನೇ ಪ್ರಶ್ನೆ ಮಾಡತಕ್ಕಂಥ. ಆಳುವ ಮತ್ತು ವಿರೋಧ ಪಕ್ಷ ಎಂಬ ಪ್ರಬೇಧವನ್ನು ಇಲ್ಲಿ ನಿರ್ಮಾಣ ಮಾಡಿ. ಇಂತಹ ಒಂದು ಅತ್ಯಂತ ಶ್ರೇಷ್ಠವಾದ ಹುದ್ದೆಗೆ ಸೂಚನೆ ಮಾಡುವಾಗ ಸೌಜನ್ಯಕ್ಕಾದರೂ ಪ್ರತಿಪಕ್ಷದ ಮುಖಂಡರನ್ನು ಕೇಳತಕ್ಕಂಥ ಒಂದು ದೊಡ್ಡತನವನ್ನು ಆಪರು ಪ್ರದರ್ಶನ ಮಾಡದೇ ಇರುವುದು ನನ್ನ ಮನಸ್ಸಿಗೆ ತುಂಬ ಖೇದವಾಗಿದೆ. ಇವತ್ತು ಲೋಕಸಭೆಯಲ್ಲಿ ವಿರೋಧಪಕ್ಷಕ್ಕೆ ಉಪಾಧ್ಯಕ್ಷರ ಸ್ಥಾನವನ್ನು ಕೊಟ್ಟಿರುವುದು, ಗುಜರಾತಿನಲ್ಲಿ ವಿರೋಧ ಪಕ್ಷಕ್ಕೆ ಈ ಸ್ಥಾನವನ್ನು ಕೊಟ್ಟಿರುವ ವರದಿಯನ್ನು ನಾವು ನೋಡಿದ್ದೇವೆ. ನಮಗೂ ಇಲ್ಲಿ ಕೊಡಿ ಎಂದು ನಾನು ಭಿಕ್ಷೆ ಬೇಡುತ್ತಿಲ್ಲ. ಆದರೆ ಈ ಒಂದು ಸ್ಥಾನಕ್ಕೆ ಗೌರವ ತುಂಬತಕ್ಕಂಥ, ಎಲ್ಲರೂ ಕ್ಷಿತು ಸಂತೋಷದಿಂದ ಮಾಡತಕ್ಕಂಥ ಕೆಲಸದಲ್ಲಿ, ನಾವು ಕೂಡ ಒಂದು ಠರಾವನ್ನು ಮಂಡನೆ ಮಾಡತಕ್ಕಂಥ ಸ್ಥಿತಿಗೆ ಕೊಂತೊಯ್ದದ್ದು ಈ ಸರ್ಕಾರದ ಒಂದು ಪ್ರವೃತ್ತಿಯಿಂದಾಗಿ ಈ ಒಂದು ಪ್ರವೃತ್ತಿಯನ್ನು ಮುಂದಾವರೂ ಮುಂದುವರೆಸಬಾರದು ಎಂಬ ಪ್ರಾರ್ಥನೆಯನ್ನು ವಿನಮ್ರವಾಗಿ ನಾನು ಸಲ್ಲಿಕೆ ಮಾಡುತ್ತಾ, ತಮ್ಮ ಮೂಲಕ ಮತ್ತೊಂದು ಮನವಿಯನ್ನು ಮಾಡುತ್ತೇನೆ. ಈ ಸದನದ ಸತ್‌ಸಂಪ್ರದಾಯಗಳನ್ನು ಈ ಬಹುದೊಡ್ಡ ದೈತ್ಯಶಕ್ತಿಯನ್ನು ಆಧಾರವಾಗಿಟ್ಟುಕೊಂಡು ನಿರ್ಣಯ ಮಾಡತಕ್ಕಂಥ ಪ್ರವೃತ್ತಿಯನ್ನು ತಾವು ಕೂಡ ಖಂಡಿಸಬೇಕು ಮತ್ತು ಸಭಾನಾಯಕರಿಗೆ ಈ ವಿಚಾರವನ್ನು ತಿಳಿಸಬೇಕೆಂದು ಹೇಳುತ್ತಾ ಈ ಠರಾವನ್ನು ನಾವು ಮಂಡನೆ ಮಾಡುವುದಿಲ್ಲವೆಂದು ಹೇಳುತ್ತೇನೆ.

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರು ಏನು ತಮ್ಮ ಉದಾತ್ತ ಭಾವನೆಯನ್ನು ವ್ಯಕ್ತಪಡಿಸಿ ತಮ್ಮ ಸೂಚನೆಯನ್ನು ಸೂಚಿಸುವುದಿಲ್ಲವೆಂದು ಹೇಳಿದ್ದಾರೆ, ಅದಕ್ಕಾಗಿ ನಾನು ಅಭಿನಂದನೆಯನ್ನು ಸಮರ್ಪಿಸುತ್ತಿದ್ದೇನೆ. ಈ ಒಂದು ಸೂಚನೆಯನ್ನು ಹಿಂತೆಗೆದುಕೊಳ್ಳತಕ್ಕಂಥ ಸಂದರ್ಭದಲ್ಲಿ ಸನ್ಮಾನ್ಯ ವಿರೋಧಪಕ್ಷದ ನಾಯಕರು ಎರಡು ವಿಚಾರಗಳನ್ನು ಬಹುಶಃ ಅತ್ಯಂತ ಖೇದದಿಂದ ಅಥವಾ ಒಂದು ರೀತಿಯ ತಮ್ಮ ದುಗುಡವನ್ನು ವ್ಯಕ್ತಪಡಿಸಿದ್ದಾರೆ. ಈಗ ಈ ಸದನದಲ್ಲಿ ಇತ್ತೀಚೆಗೆ ನಡೆದುಕೊಂಡು ಬಂದ ವಿಚಾರಗಳು ತಮಗೆ ಗೊತ್ತಿದೆ. ಅಧ್ಯಕ್ಷರೇ, ತಮಗೆ ಗೊತ್ತಿದೆ. ಬಹುಶಃ ಯಾವಾಗಲೂ ವಿರೋಧ ಪಕ್ಷದವರಿಗೆ ಈ ಸದನದಲ್ಲಿ ಅಥವಾ ಆ ಸದನದಲ್ಲಿ ಉಪಾಧ್ಯಕ್ಷರ ಸ್ಥಾನವನ್ನು ಯಾವಾಗಲಾದರೂ ಬಿಟ್ಟು ಕೊಟ್ಟಿದ್ದರೆ ಅದು ಕಾಂಗ್ರೆಸ್‌ಪಕ್ಷ. ತಮಗೆ ಗೊತ್ತಿದೆ, ಶ್ರೀ ವಿ.ಎಸ್. ಕೃಷ್ಣಯ್ಯರ್ ಅವರ ವಿಚಾರ. ೧೯೬೦ರಲ್ಲಿ ಉಪಸಭಾಪತಿಯವರ ವಿಚಾರ ಅಲ್ಲಿ ಪ್ರಸ್ತಾಪವಾದಾಗ...

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ.—ಏಕೆಂದರೆ ಇತಿಹಾಸವನ್ನು ಮರೆಯಲಿಕ್ಕಾಗುವುದಿಲ್ಲ. ಅವರು ಹೇಳಿದ್ದರಿಂದ ನಾನು ಹೇಳಬೇಕಾಗುತ್ತದೆ. ಆದ್ದರಿಂದ ಈ ದಿವಸ ಅವರು ಏನು ಉದಾತ್ತವಾದ ಮನೋಭಾವನೆ ತೋರಿಸಿದ್ದಾರೆ. ಉಚ್ಚ ಪರಂಪರೆಯನ್ನು ಹಾಕತಕ್ಕಂಥ ಕೆಲಸ ಮಾಡಿದ್ದಾರೆ, ಅದಕ್ಕಾಗಿ ವೈಯಕ್ತಿಕವಾಗಿ ನನ್ನ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಇನ್ನು ಎರಡನೇ ವಿಚಾರ...

ಅಧ್ಯಕ್ಷರು.—ಅದು ಬೇಡ ಬಿಡಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಆಯಿತು ಅದನ್ನು ನಾನು ಅಷ್ಟಕ್ಕೇ ಸೀಮಿತಗೊಳಿಸುತ್ತೇನೆ. ಎರಡನೇಯದಾಗಿ ಅವರನ್ನು ಕೇಳತಕ್ಕಂಥ ವಿಚಾರ. ಆಗ ನಮ್ಮ ವಿರೋಧ ಪಕ್ಷದ ನಾಯಕರಾಗಿದ್ದ ಶ್ರೀಮತಿ ನಾಗರತ್ನಮ್ಮನವರು ಇಲ್ಲಿ ಇದ್ದಾರೆ. ಅದಕ್ಕಿಂತ ಮೊದಲು ವಿರೋಧ ಪಕ್ಷದ ನಾಯಕರಾದ ಶ್ರೀ ಬಂಗಾರಪ್ಪನವರು ಇಲ್ಲಿದ್ದಾರೆ ನಾನು ಕೂಡ ಇಲ್ಲಿ ವಿರೋಧ ಪಕ್ಷದ ನಾಯಕನಾಗಿದ್ದೇನೆ. ನಾವು ಮೂವರೂ ಕೂಡ ಇಲ್ಲಿ ಇದ್ದೇವೆ. ಪ್ರತ್ಯಕ್ಷದರ್ಶಿಗಳಾಗಿದ್ದವರು ನಾವು ಮೂವರು ಸಹ ಇಲ್ಲಿ ಇದ್ದೇವೆ, ಅಧ್ಯಕ್ಷರ ಸ್ಥಾನವಾಗಲೀ, ಉಪಾಧ್ಯಕ್ಷರ ಸ್ಥಾನವಾಗಲೀ, ೧೯೫೩ ರಿಂದ ಈವರೆಗೆ ವಿರೋಧ ಪಕ್ಷದ ನಾಯಕರನ್ನು ಒಂದು ಮಾತಿಗೆ, ಸೌಜನ್ಯತೆಯಿಂದ ಕೇಳಿದಂಥ ಪ್ರಸಂಗ ಇಲ್ಲ

೧–೩೦ ಪಿ. ಎಂ.

ಇದಕ್ಕೆ ನಾವು ಮೂರು ಜನ ಕೂಡ ಪ್ರತ್ಯಕ್ಷದರ್ಶಿಗಳಿದ್ದೇವೆ. ಆದ್ದರಿಂದ ಅವರು ಏನು ಸೂಚನೆ ಕೊಟ್ಟಿದ್ದಾರೆ. ಅದನ್ನು ಮುಂದುವರಿಸಿಕೊಂಡು ಹೋಗುವುದು ಬೇಡ. ಅದು ಕಷ್ಟ ಎಂದು ತಾವು ಹೇಳುವುದಾದರೆ. ಈ ದೈತ್ಯಶಕ್ತಿ ಎಲ್ಲಿ ಅಡಗಿದೆ ಎಂಬುದನ್ನು ಹುಡುಕುವುದು ಕಷ್ಟವಾಗಿದೆ. ಈ ದೈತ್ಯಶಕ್ತಿಯಂ ವ್ಯಾಖ್ಯಾನ ಎರಡು ಮುಖವಿವಾಗಿರಬಾರದು. ಅದು ಒಂದೇ ಮುಖವಿವಾಗಿರಬೇಕು. ಆದರಿಂದ ಪರಸ್ಪರ ಪಾಲ್ಗಳ ಸ್ಪಷ್ಟ ಪರಿಜ್ಞಾನವನ್ನು ನಾವಿಬ್ಬರೂ ಅರಿತುಕೊಂಡು, ಒಳ್ಳೆಯ ಸಂಪ್ರದಾಯವನ್ನು ಹಾಕುವುದಕ್ಕೆ ನಮ್ಮ ಒಪ್ಪಿಗೆ ಇದೆ ಎಂಬುದನ್ನು ತಮಗೆ ತಿಳಿಸುವುದಕ್ಕೆ ನಾನು ಇಷ್ಟಪಡುತ್ತೇನೆ.

ಅಧ್ಯಕ್ಷರು.—ಈಗ ಶ್ರೀ ಕೆ. ಹೆಚ್. ಪಾಟೀಲ್ ಅವರು ಸೂಚಿಸಿರುವ ಪ್ರಸ್ತಾವನೆಯನ್ನು ಮತಕ್ಕೆ ಹಾಕುತ್ತೇನೆ.

ಪ್ರಸ್ತಾವ ಏನೆಂದರೆ, ''ಶ್ರೀಮತಿ ನಾಗಮ್ಮ ಕೇಶವಮೂರ್ತಿ ಅವರನ್ನು ವಿಧಾನ ಸಭೆಯ ಉಪಾಧ್ಯಕ್ಷೆಯನ್ನಾಗಿ ಚುನಾಯಿಸುವುದು.''

(ಪ್ರಸ್ತಾವವು ಅವಿರೋಧವಾಗಿ ಅಂಗೀಕೃತವಾಯಿತು ಮತ್ತು ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರನ್ನು ಸರ್ವಾನುಮತದಿಂದ ವಿಧಾನಸಭೆಯ ಉಪಾಧ್ಯಕ್ಷರನ್ನಾಗಿ ಆಯ್ಕೆಮಾಡಲಾಯಿತು).

(ಮಾನ್ಯ ಕೆ.ಹೆಚ್. ಪಾಟೀಲ್, ಶ್ರೀಮತಿ ಚಂದ್ರಪ್ರಭಾ ಅರಸ್ ಮತ್ತು ವಿರೋಧ ಪಕ್ಷದ ನಾಯಕರಾದ ಶ್ರೀ ಡಿ. ಬಿ. ಚಂದ್ರೇಗೌಡರು ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರನ್ನು, ಉಪಾಧ್ಯಕ್ಷರ ಸ್ಥಾನಕ್ಕೆ ತರಬೇಕೆಂದು ಅಧ್ಯಕ್ಷರು ಸೂಚಿಸಿದರು).

(ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರನ್ನು ಉಪಾಧ್ಯಕ್ಷರ ಸ್ಥಾನಕ್ಕೆ ಕರೆದು ತರಲಾಯಿತು.)

† ಶ್ರೀ ಎಂ. ವೀರಪ್ಪ ಮೊಯ್ಲಿ (ಕಾನೂನು ಸಚಿವರು).—ಸನ್ಮಾನ್ಯ ಅಧ್ಯಕ್ಷರೆ, ಈ ದಿವಸ ನಮ್ಮ ಕರ್ನಾಟಕ ವಿಧಾನ ಮಂಡಲದ ಪರಂಪರೆಯಲ್ಲಿ ಒಂದು ಮೈಲಿಗಲ್ಲು ಎಂದು ನಾನು ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಇವತ್ತು ಏನು ಸರ್ವಾನುಮತದಿಂದ ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರು ಉಪಾಧ್ಯಕ್ಷರಿಣಿಯಾಗಿ ಆಯ್ಕೆಯಾಗಿದ್ದಾರೆ, ಇದು ಒಳ್ಳೆಯ ಪರಂಪರೆ. ಈ ಸದನದಲ್ಲಿ ಆ ಕಡೆಯವರು ಹೇಳಿದಂಥ ವಿಚಾರದಲ್ಲಿ ನಾನು ಈಗಾಗಲೇ ಅಭಿನಂದನೆ ಸಲ್ಲಿಸಿದ್ದೇನೆ. ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರು ಈ ಸದನದ ಪರಂಪರೆಗಳಿಗೆ ಹೊಸಬರಲ್ಲ. ಅವರಲ್ಲಿಯೂ ಕೂಡ ಅವರಿಗೆ ಒಂದು ವಿಶಿಷ್ಟವಾದ ಅನುಭವ ಇದೆ. ನಮ್ಮ ಶ್ರೀಮತಿ ಕೆ. ಎಸ್. ನಾಗರತ್ನಮ್ಮನವರು, ಅಧ್ಯಕ್ಷರಾಗಿದ್ದಾಗ, ಇವರೂ ಕೂಡ ಸದಸ್ಯರಾಗಿದ್ದರು. ಕೆಲವುಸಾರಿ ಈ ಸಭೆ ಜನಗಳ ಸಮಸ್ಯೆಗಳಿಗೆ ಸ್ಪಂದಿಸತಕ್ಕ ಸಂದರ್ಭದಲ್ಲಿ ಅನೇಕ ಪ್ರಸಂಗಗಳಲ್ಲಿ ಒಂದು ರೀತಿಯ ಆಲ್ಲೋಲಕಲ್ಲೋಲ ಪರಿಸ್ಥಿತಿ ಬಂದಾಗ ಕೂಡ ನನಗನ್ನಿಸುತ್ತದೆ. ಅದನ್ನು ನಿಭಾಯಿಸತಕ್ಕ ಕಾರ್ಯದಲ್ಲಿ ಮಾನ್ಯ ಸದಸ್ಯರ ಸಹಕಾರವೂ ಬೇಕು. ನಾನು ದೆಹಲಿಯಲ್ಲಿ ೯ ವಿಧಾನ ಸಭೆಗೆ ಬಂದಾಗ ನಾನು ಇನ್ನೂ ಯುವಕನಾಗಿದ್ದೆ. ಆಗಿನಿಂದಲೂ ಇಲ್ಲಿನ ವಿಚಾರಗಳನ್ನು ಗಮನಿಸಿದ್ದೇನೆ. ಒಬ್ಬ ಮಹಿಳೆ ಈ ಒಂದು ಸಭಾಧ್ಯಕ್ಷರ ಸ್ಥಾನದಲ್ಲಿ ಕುಳಿತುಕೊಂಡು ಇದನ್ನೆಲ್ಲಾ ನಿಭಾಯಿಸಿಕೊಂಡು ಹೋಗಲು ಸಾಧ್ಯ ಇದೆಯೇ ಎಂಬ ಪ್ರಶ್ನಾರ್ಹವಾದ ಚಿಹ್ನೆ ಆಗ ನಮ್ಮಲ್ಲಿ ಮೂಡಿ ಬಂತು. ಆ ಸಂದರ್ಭದಲ್ಲಿ ಶ್ರೀಮತಿ ಕೆ. ಎಸ್. ನಾಗರತ್ನಮ್ಮನವರು ಬಹುಶಃ ಒಂದು ಅದ್ವಿತೀಯವಾದ ರೀತಿಯಲ್ಲಿ ಈ ವಿಧಾನಮಂಡಲವನ್ನು ನಡೆಸಿಕೊಂಡು ಬಂದಿದ್ದು ಈಗಲೂ ನಮ್ಮ ಮನಸ್ಸಿನಲ್ಲಿ ಅಚ್ಚಳಿಯದೇ ಉಳಿದಿದೆ. ಅಷ್ಟು ಮಾತ್ರವಲ್ಲ, ಅನೇಕ ಸಂದರ್ಭದಲ್ಲಿ ಯುವಕರಿಗೆ ಮತ್ತು ಯುವ ಶಾಸಕರಿಗೆ ಹೆಚ್ಚು ಪ್ರೋತ್ಸಾಹ ಕೊಟ್ಟು ಅವರು ಹೇಗೆ ನಡೆಸಿಕೊಂಡು ಬಂದರು ಎಂಬುದು ಈಗ ಉಪಾಧ್ಯಕ್ಷರಾಗಿ ಆಯ್ಕೆಯಾಗಿರುವ ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರಿಗೂ ಆ ಅನುಭವ ಇದೆ. ಮಹಿಳೆ ಯಾವಾಗಲೂ ಒಂದು ಶಕ್ತಿ. ಆ ಶಕ್ತಿ ಯಾವಾಗಲೂ ಇಂತಹ ಸಭೆಗಳನ್ನು ಅಥವಾ ಇಂತಹ ಒಂದು ಕಾರ್ಯಕಲಾಪಗಳನ್ನು ನಡೆಸಿಕೊಂಡು ಹೋಗುವುದಲ್ಲದೆ ಅದು ಯಾವ ಒಂದು ದಿಕ್ಕಿನಲ್ಲಿದ್ದರೂ ಕೂಡಾ ಅದನ್ನು ಬಹುಶಃ ಕೆಲವು ಸಾರಿ ಗಂಡಸರಿಗಿಂತಲೂ ಹೆಚ್ಚು ವ್ಯವಸ್ಥಿತವಾಗಿ ಹಾಗೂ ಸೂಕ್ಷ್ಮತೆಯಿಂದ ನಡೆಸಿಕೊಂಡು ಹೋಗತಕ್ಕಂಥ ಒಂದು ಪರಂಪರೆ ಏನು ಶ್ರೀಮತಿ ನಾಗರತ್ನಮ್ಮನವರು ತೋರಿಸಿಕೊಟ್ಟಿರುವ ಆ ಒಂದು ಅನುಭವವನ್ನು ಸಂಪೂರ್ಣವಾಗಿ ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರೂ ಅನುಸರಿಸಿಕೊಂಡು ಹೋಗುತ್ತಾರೆ ಎಂದು ಗೊತ್ತಿದೆ. ಏತಕ್ಕೆಂದರೆ ನಾವು ಅವರನ್ನು ಬಹಳ ಇನಿವಿಯಿಂದಲೂ ಬಲ್ಲೆವು. ಅವರು ಸರಳರು ಮತ್ತು ಸನ್ಮಾನ್ಯ ಸಚಿವರಾಗಿ ಕೂಡಾ ಅತ್ಯಂತ ದಕ್ಷತೆಯಿಂದ ಕೆಲಸ ಮಾಡಿದವರು. ಅವರು ಯಾವುದೇ ಒಂದು ರೀತಿಯ ರಾಗದ್ವೇಷ ಇಲ್ಲದೆ ಎಲ್ಲರನ್ನೂ ಕೂಡಾ ಸಮಾನವಾಗಿ ನಡೆಸಿಕೊಂಡು ಹೋಗತಕ್ಕಂಥ ಒಂದು ಚೈತನ್ಯ ಮತ್ತು ಒಂದು ಪರಿಜ್ಞಾನವನ್ನು ಇಟ್ಟುಕೊಂಡಿದ್ದಾರೆ. ನಮ್ಮ ನಾಗರತ್ನಮ್ಮನವರು ಸ್ಪೀಕರ್ ಆಗಿದ್ದಾಗ ಹೇಳುತ್ತಿದ್ದರು, ಏನೆಂದರೆ, ಇಲ್ಲಿ ಒಂದು ಪರಿಪಾಠ ಇದೆ, ಅದೇನೆಂದರೆ ಡೆಪ್ಯುಟಿ ಸ್ಪೀಕರ್ ಸ್ಥಾನಕ್ಕೆ ಕೆಲವು ಸಲ ಯಾರಿಗೂ ಬೇಡ, ಅವರನ್ನು ಎಳೆದುಕೊಂಡು ಬಂದು ಕೂಡಿಸಬೇಕಾಗುತ್ತದೆ ಆ ಒಂದು ರೀತಿಯ ಪರಂಪರೆ ಇದೆ, ಪರಿಪಾಠ ಇದೆ ಎಂದು ಅವರು ಹೇಳುತ್ತಿದ್ದರು. ಆದರೆ ನನಗನ್ನಿಸುತ್ತದೆ, ಯಾವುದೇ ಜವಾಬ್ದಾರಿ ಬಂದರೂ ಕೂಡಾ ಅದನ್ನು ಹಸನ್ಮುಖಿಗಳಾಗಿ ಬಹಳ ದಕ್ಷತೆಯಿಂದ, ಸಹನೆಯಿಂದ ನಿರವೇರಿಸತಕ್ಕಂಥ ಒಂದು ಮನೋಭಾವನೆಯನ್ನು ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರು ಬೆಳೆಸಿಕೊಂಡು ಬಂದಿದ್ದಾರೆ. ಆ ಸ್ಥಾನಕ್ಕೆ ಅವರು ಅತ್ಯಂತ ಹೆಚ್ಚಿನ ಶೋಭೆ ತರುವುದು ಮಾತ್ರವಲ್ಲ ಅತ್ಯಂತ ಹೆಚ್ಚಿನ ಪ್ರಾಮುಖ್ಯತೆ ಆ ಸ್ಥಾನಕ್ಕೆ ಇದೆ ಎಂದು ಅದರ ವೈಶಿಷ್ಟ್ಯತೆಯನ್ನು ತೋರಿಸಿಕೊಡುವುದರಲ್ಲಿ ಅವರು ಯಶಸ್ವಿಯಾಗುತ್ತಾರೆ ಎಂಬ ವಿಶ್ವಾಸವನ್ನು ಹಾಗೂ ಒಂದು ಭರವಸೆಯನ್ನು ನಾನು ಖಂಡಿತವಾಗಿ ಇಟ್ಟುಕೊಂಡಿದ್ದೇನೆ ಮತ್ತು ಅವರು ಈಗ ಸರ್ವಾನುಮತದಿಂದ ಚುನಾಯಿತರಾಗಿದ್ದಾರೆ, ಆದಕ್ಕಾಗಿ ನನಗನ್ನಿಸುತ್ತದೆ. ಈ ಸದನದ ಎಲ್ಲ ಸದಸ್ಯರ ಸಹಾಯ ಅವರಿಗೆ ಇರುವುದರ ಜೊತೆಯಲ್ಲಿ, ಸಮತೋಲನವಾಗಿ ಈ ಸದನದ ಕಾರ್ಯಕಲಾಪಗಳನ್ನು ನಿರ್ವಹಿಸುವುದರಲ್ಲಿ ಅವರಿಗೆ ಹೆಚ್ಚಿನ ಶಕ್ತಿ ಬಂದಿದೆ ಎಂದು ನಾನು ಭಾವನೆ ಮಾಡಿಕೊಂಡಿದ್ದೇನೆ ಇಲ್ಲಿ ಮಹಿಳೆಯರು ಕಡಿಮೆ ಸಂಖ್ಯೆಯಲ್ಲಿದ್ದರೂ ಕೂಡಾ ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರು ಈ ಸ್ಥಾನವನ್ನು ಅಲಂಕರಿಸಿದ ಮೇಲೆ ಇಡೀ ಮಹಿಳೆಯರ ಕೂಟಕ್ಕೆ ಹೆಚ್ಚು ಶಕ್ತಿ ಮತ್ತು ಅವರಿಗೆ ಹೆಚ್ಚು ಘನತೆ ಬಂದಿದೆ ಎಂದು ನನಗನ್ನಿಸುತ್ತದೆ. ಮತ್ತು ಈ ವಿಧಾನಮಂಡಲದಲ್ಲಿ ಅವರು ತಮ್ಮದೇ ಆದಂಥ ವೈಶಿಷ್ಟ್ಯಪೂರ್ಣವಾದ ಒಂದು ವ್ಯಕ್ತಿತ್ವವನ್ನು ಪ್ರತಿಬಿಂಬಿಸತಕ್ಕ ಹೆಚ್ಚಿನ ಅವಕಾಶ ದೊರಕಲಿದೆ ಎಂದು ನಾನು ಭಾವನೆ ಮಾಡುತ್ತೇನೆ. ಅಧ್ಯಕ್ಷರೆ, ಸನ್ಮಾನ್ಯ ನಾಗಮ್ಮ ಕೇಶವಮೂರ್ತಿಯವರು ಉಪಾಧ್ಯಕ್ಷರಾಗಿ ತಮ್ಮ ಮಾರ್ಗದರ್ಶನದಲ್ಲಿ ಇನ್ನೂ ಹೆಚ್ಚು ಅನುಭವವನ್ನು ಇನ್ನೂ ಹೆಚ್ಚು ಒಂದು ಯಶಸ್ವಿಯಾದ ರೀತಿಯಲ್ಲಿ ವಿಧಾನ

ಮಂಡಲವನ್ನು ನಡೆಸಿಕೊಂಡು ಒಂದು ಪರಿಪಕ್ವತೆಯನ್ನು, ಪರಂಪರೆಯನ್ನು ಪಾಲಿಸಿಕೊಂಡು ಹೋಗತಕ್ಕಂಥ ಪರಿಸ್ಥಿತಿ ವಿಧಾನಮಂಡಲದಲ್ಲಿ ಖಂಡಿತವಾಗಿಯೂ ಪ್ರಾರಂಭವಾಗುತ್ತದೆ ಎಂದು ಹಾರೈಸಿ, ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರಿಗೆ ಈ ಒಂದು ಸ್ಥಾನದಲ್ಲಿ ಅತೀ ಹೆಚ್ಚಿನ ಯಶಸ್ಸು, ಕೀರ್ತಿ ಮತ್ತು ಅವರ ವ್ಯಕ್ತಿತ್ವಕ್ಕೆ ಹೆಚ್ಚಿನ ಮೆರಗು ದೊರಕಲಿ ಎಂದು ಹಾರೈಸಿ ನನ್ನ ಎರಡು ಮಾತನ್ನು ಮುಗಿಸುತ್ತೇನೆ.

† ಶ್ರೀ ಡಿ. ಬಿ. ಚಂದ್ರೇಗೌಡ (ವಿರೋಧ ಪಕ್ಷದ ನಾಯಕರು).— ಮಾನ್ಯ ಅಧ್ಯಕ್ಷರೇ ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರು ಈ ಸದನದ ಉಪಾಧ್ಯಕ್ಷರಾಗಿ ಆಲಂಕರಿಸಿರುವುದು ನಮಗೆಲ್ಲಾ ಬಹಳ ಸಂತೋಷ. ಮತ್ತು ಬಹಳ ಆನಂದವನ್ನುಂಟು ಮಾಡುತ್ತದೆ. ಅದಕ್ಕೆ ಎರಡು ಕಾರಣಗಳು ಇವೆ. ಒಂದು ಪ್ರಮುಖವಾದ ಕಾರಣವೇನೆಂದರೆ ಪ್ರತಿಪಕ್ಷದ ಸ್ಥಾನದಲ್ಲಿ ತಾಯಿತನದ ಒಂದು ಸ್ಥಾನ ಇಲ್ಲದೆ ನಾವು ತಬ್ಬಲಿಗಳಾಗಿದ್ದೆವು. ನಮ್ಮ ಕಡೆಗೂ ಒಬ್ಬ ಹೆಣ್ಣುಮಗಳು ಬಂದು ಕುಳಿತುಕೊಂಡಿರುವುದು. ಮತ್ತೊಂದು ಸಂತೋಷ ಕೊಡತಕ್ಕಂಥಾದ್ದು ಎರಡನೆಯ ಕಾರಣವೇನೆಂದರೆ ಶ್ರೀಮತಿ ಸುಮತಿ ಮಡಿವಾಳರವರು ಈ ಸದನದ ಉಪಾಧ್ಯಕ್ಷರಾಗಿ ಕೆಲಸ ಮಾಡಿದ್ದರು. ಆದಾದ ಮೇಲೆ ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರು ಈ ಸದನದ ಎರಡನೆ ಮಹಿಳೆಯಾಗಿ ಈ ಜಾಗವನ್ನು ಅಲಂಕರಿಸಿರುವುದು. ನಾನು ಸುಮಾರು ೨೦ ವರ್ಷಗಳಿಗಿಂತಹ ಹೆಚ್ಚು ಕಾಲ ಅವರನ್ನು ಆತ್ಮೀಯವಾಗಿ ಬಹಳ ಹತ್ತಿರದಿಂದ ಬಲ್ಲವನು. ಈ ಸದನದಲ್ಲಿ ಅವರ ಕಾರ್ಯ ವೈಖರಿಯನ್ನು ನೋಡಿದ್ದೇನೆ ಮಂತ್ರಿಗಳಾಗಿ, ಶಾಸನಸಭಾ ಸದಸ್ಯರಾಗಿ ಅವರು ಹೆಚ್ಚು ಅನುಭವವನ್ನು ಪಡೆದಿದ್ದಾರೆ. ಅವರ ಅನುಭವ ಮತ್ತು ಸರಳತೆ ಇನ್ನು ಹೆಚ್ಚು ಅವರಿಗೆ ಇರತಕ್ಕಂಥ ಸಮಾಧಾನ ಪ್ರವೃತ್ತಿ, ಈ ಸಭೆಗೆ ಮತ್ತಷ್ಟು ಶೋಭೆಯನ್ನು ತರುತ್ತದೆಂದು ನಾನು ಭಾವನೆ ಮಾಡುತ್ತೇನೆ. ಅವರಲ್ಲಿ ನಾನು ಒಂದು ವಿಶೇಷವಾದ ಪ್ರಾರ್ಥನೆಯನ್ನು ಮಾಡಿಕೊಳ್ಳುವುದೇನೆಂದರೆ ಈ ಸದನದಲ್ಲಿ ಒಂದು ಕಡೆ ಭಾರಿ ಆಳುವ ಪಕ್ಷದ ಸಂಖ್ಯೆ ಇದ್ದರೂ ಇನ್ನೊಂದು ಕಡೆ ಪ್ರತಿಪಕ್ಷದ ಸಂಖ್ಯೆಯನ್ನು ಸಹ ಅವರು ಗಮನದಲ್ಲಿಟ್ಟುಕೊಂಡು ಅಷ್ಟೇ ಸಂಖ್ಯೆಯ ಬಲವನ್ನು ನಮಗೆ ಶಾಸನಸಭೆಯಲ್ಲಿ ಅವಕಾಶ ಕೊಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಅದು ಒಂದು ರೀತಿಯಲ್ಲಿ ಸತ್ಸಂಪ್ರದಾಯ ಕೂಡ ಆಗುತ್ತದೆ. ನನ್ನ ಮನಸ್ಸಿಗೆ ಒಂದು ವ್ಯಥೆ ಬಂದಿದೆ ಅದೇನೆಂದರೆ ಇಂತಹ ಒಬ್ಬ ಹಿರಿಯ ಮಹಿಳೆಯನ್ನು ಆ ಜಾಗಕ್ಕೆ ಕರೆತರುವಾಗ ಮಾನ್ಯ ಸಭಾನಾಯಕರು ಸೂಚನೆಯನ್ನು ಮಂಡನೆ ಮಾಡಿ ಆ ಸೂಚನೆಯನ್ನು ಪ್ರತಿಪಕ್ಷದವರು ಅನುಮೋದನೆ ಮಾಡಿದ್ದರೆ ಮತ್ತಷ್ಟು ಆ ಸ್ಥಾನಕ್ಕೆ ಹೆಚ್ಚು ಗೌರವ ಬರುತ್ತಿತ್ತು. ಇದು ನಮ್ಮಿಂದ ಆದದ್ದು ಅಲ್ಲ. ಇದು ಕೇವಲ ನನ್ನ ಅನಿಸಿಕೆ. ನಾನು ಯಾರನ್ನು ಆಕ್ಷೇಪಣೆ ಮಾಡತಕ್ಕಂಥಾದ್ದಕ್ಕೆ ಹೇಳುತ್ತಿಲ್ಲ. ಈ ಕೆಲಸ ನಮ್ಮ ಕಡೆಯಿಂದ ಆಗಲಿಲ್ಲ. ಏನೇ ಆದರೂ ಆದನ್ನೆಲ್ಲಾ ನಾವು ಮನಸ್ಸಿನಲ್ಲಿಟ್ಟುಕೊಳ್ಳದೆ ಈ ಒಂದು ಸಭೆಯ ಕೀರ್ತಿ ಈ ಒಂದು ವಿಧಾನ ಸೌಧದ ಇತಿಹಾಸ, ಪರಂಪರೆ ಇಡೀ ದೇಶದಲ್ಲೆಯೇ ಅಭಿಮಾನಕ್ಕೆ ಮತ್ತು ಗೌರವಕ್ಕೆ ಪಾತ್ರವಾಗಿರತಕ್ಕಂಥಾದ್ದು, ಈ ಸಭೆಯು ಅಂತಹ ಒಳ್ಳೆಯ ಕಾರ್ಯಕಲಾಪಗಳನ್ನು ನಡೆಸಿಕೊಂಡು ಬಂದಿದೆ. ಶತಮಾನಗಳಿಗೂ ಹೆಚ್ಚು ಒಳ್ಳೆಯ ಪ್ರತೀತಿ ಈ ಶಾಸನಸಭೆಗೆ ಇದೆ. ಇತ್ತೀಚಿನ ದಿವಸಗಳಲ್ಲಿ ಈ ಸಭೆಯ ಕಾರ್ಯಕಲಾಪಗಳನ್ನು ಸೂಕ್ಷ್ಮವಾಗಿ ಬೇರೆ ರಾಜ್ಯಗಳವರು ನೋಡತಕ್ಕಂಥ ಪರಿಪಾಠವನ್ನು ಬೆಳೆಸಿಕೊಂಡಿದ್ದಾರೆ. ಅಂತಹ ಒಂದು ಸತ್ಸಂಪ್ರದಾಯವನ್ನು ಕಾಪಾಡಿಕೊಂಡು ಬರುವುದಕ್ಕೆ ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರು ಖಂಡಿತವಾಗಿ ಶ್ರಮಿಸುತ್ತಾರೆ ಎನ್ನುವ ವಿಶ್ವಾಸ ನನಗೆ ಇದೆ.ಅವರಿಗೆ ನಮ್ಮ ಕಡೆಯಿಂದ ಸಹಾಯ ಸಂಪೂರ್ಣವಾಗಿ ಇದೆ ಎಂದು ನಾನು ಭರವಸೆ ಕೊಡುತ್ತಾ ಇದರ ಜೊತೆಗೆ ಒಳ್ಳೆಯ ಕೆಲಸ ಮಾಡಿದಂತಹ ಕೀರ್ತಿ ಮತ್ತು ಗೌರವ ಅವರ ಕಾಲದಲ್ಲಿ ಆಗಲಿ ಈ ಶಾಸನ ಸಭೆಯಲ್ಲಿ ಅವರು ಹೆಚ್ಚಿನ ಪೌಢಿಮೆಯನ್ನು ಪ್ರದರ್ಶಿಸಲಿ ಎಂದು ಮತ್ತೊಮ್ಮೆ ಹಾರೈಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಎಚ್. ಪಾಟೀಲ್ (ಗದಗ್).—ಮಾನ್ಯ ಅಧ್ಯಕ್ಷರೇ ಮಾನ್ಯ ಮಂತ್ರಿಗಳಾದಂತಹ ವೀರಪ್ಪ ಮೊಯ್ಲಿಯವರ ಮಾತನ್ನು ಮತ್ತು ಶ್ರೀ ಚಂದ್ರೇಗೌಡರ ಮಾತನ್ನು ನಾನು ಕೇಳಿದ ನಂತರ ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರ ಬಗ್ಗೆ ಸರ್ವ ಜನರ ಅಭಿಪ್ರಾಯ ಏನಿದೆ ಎನ್ನುವುದು ವ್ಯಕ್ತವಾಗುತ್ತದೆ. ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರು ಈ ಸದನದಲ್ಲಿ ಈಗಾಗಲೇ ಅಧ್ಯಕ್ಷರಾಗಿ ಕೆಲಸ ಮಾಡಿರುವ ಶ್ರೀಮತಿ ನಾಗರತ್ನಮ್ಮನವರ ಆದರ್ಶಗಳನ್ನು ಮುಂದುವರಿಸಿಕೊಂಡು ಹೋಗಿ ಎರಡೂ ಪಕ್ಷದ ಜನರಿಗೆ ಸಮಾಧಾನವಾಗುವ ರೀತಿಯಲ್ಲಿ ನ್ಯಾಯವಾಗಿ ಹಾಗೂ ಯಾರಿಗೂ ಅನ್ಯಾಯವಾಗದ ರೀತಿಯಲ್ಲಿ ನಡೆದುಕೊಳ್ಳುತ್ತಾರೆನ್ನುವ ಭರವಸೆ ನನಗೆ ಇದೆ. ಆ ದೃಷ್ಟಿಯಿಂದಲೇ ನಾನು ಸೂಚನೆ ಮಾಡಿದ್ದು, ಅದೇ ರೀತಿ ಮಾನ್ಯ ಎಸ್. ಎಂ. ಕೃಷ್ಣ ಅವರ ಹೆಸರನ್ನು ಸಭಾಧ್ಯಕ್ಷ ಸ್ಥಾನಕ್ಕೆ ನಾನು ಸೂಚನೆ ಮಾಡಿದ್ದೆ, ಅದೇ ರೀತಿ ಅವರ ಆಯ್ಕೆ ಅವಿರೋಧವಾಗಿ

ನಡೆದದ್ದು ನಮಗೆ ಬಹಳ ಸಂತೋಷ ಉಂಟು ಮಾಡಿದೆ. ಅದೇ ಪರಂಪರೆಯನ್ನು ಪುನಃ ಉಪಾಧ್ಯಕ್ಷರ ಆಯ್ಕೆಯಲ್ಲೂ ನಡೆದಿದೆ. ಒಂದು ಸಂದರ್ಭದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾ ಉಪಾಧ್ಯಕ್ಷರನ್ನು ಆಯ್ಕೆ ಮಾಡುವ ಸಂದರ್ಭದಲ್ಲಿ ನಮ್ಮನ್ನು ಒಂದು ಮಾತೂ ಕೇಳಲಿಲ್ಲ ವೆಂದು ಅಪಸ್ವರವನ್ನು ಎತ್ತಿದರು. ಈಗ ವಿರೋಧ ಪಕ್ಷದಲ್ಲಿರುವ ಪಕ್ಷದ ಸರ್ಕಾರ ಈ ಹಿಂದೆ ಇದ್ದಾಗ ಉಪಾಧ್ಯಕ್ಷರ ಆಯ್ಕೆ ಸಂದರ್ಭದಲ್ಲಿ ನಮ್ಮನ್ನೂ ಕೇಳಿರಲಿಲ್ಲ. ಆದ್ದರಿಂದ ನಾವು ಅವರನ್ನು ಕೇಳಲಿಲ್ಲ ಎಂದು ನಮ್ಮ ಸರ್ಕಾರ ಹೇಳಿದೆ. ನಿನ್ನೆ ದಿವಸ ಮಾನ್ಯ ಕೌಜಲಗಿಯವರು ನನ್ನ ಹತ್ತಿರ ಬಂದು ಉಪಾಧ್ಯಕ್ಷರ ಆಯ್ಕೆ ಸಂದರ್ಭದಲ್ಲಿ ನಮ್ಮನ್ನೂ ಒಂದು ಮಾತು ಕೇಳಬಹುದಾಗಿತ್ತೆಂದು ಹೇಳಿದರು. ಮಾನ್ಯ ಕೌಜಲಗಿಯವರು ಬಹಳ ಉತ್ತಮ ಮನುಷ್ಯರು. ಅವರಿಗೆ ನಾನು ಹೇಳಿದೆ, ನಿಮ್ಮ ಸರ್ಕಾರ ಇದ್ದಾಗ ಉಪಾಧ್ಯಕ್ಷರ ಆಯ್ಕೆ ಸಂದರ್ಭದಲ್ಲಿ ನಮ್ಮನ್ನು ಕೇಳದೇ ಮಾಡಿದ್ದರಿಂದ ಅದೇ ಸಂಪ್ರದಾಯ ವೆನ್ನು ನಾವು ಅನುಸರಿಸಿದ್ದೇವೆಂದು ಹೇಳಿದೆ. ಈ ದಿವಸ ಉಪಾಧ್ಯಕ್ಷ ಸ್ಥಾನಕ್ಕೆ ಆಯ್ಕೆಯಾಗಿರುವ ಶ್ರೀಮತಿ ನಾಗಮ್ಮ ಕೇಶವ ಮೂರ್ತಿಯವರು ಬಹಳ ದಿವಸಗಳಿಂದಲೂ ಸಮಾಜವಾದದ ರೂಪುರೇಷೆ ಗಳನ್ನು ಇಟ್ಟುಕೊಂಡು ಕೆಲಸ ಮಾಡಿಕೊಂಡು ಬಂದಿದ್ದಾರೆ. ಅವರು ಬಹಳ ಆದರ್ಶವಾದಿ ಗಳು. ಇವತ್ತಿನ ದಿವಸ ಎಲ್ಲಾ ಹೆಣ್ಣುಮಕ್ಕಳಿಗೂ ಒಳ್ಳೆಯ ಸ್ಥಾನಮಾನ ಸಿಗಬೇಕೆನ್ನುವುದು ತಪ್ಪಲ್ಲ. ಮಹಿಳೆಯರು ಉತ್ತಮ ಸ್ಥಾನಮಾನಗಳನ್ನು ಪಡೆಯುವುದಕ್ಕೆ ಎಲ್ಲರೂ ಸಹಕಾರ ಮಾಡಬೇಕು ನಮ್ಮ ರಾಷ್ಟ್ರದಲ್ಲಿ ಹೆಣ್ಣುಮಕ್ಕಳಿಗೆ ಹೆಚ್ಚಿನ ಒಂದು ಸ್ಥಾನಮಾನ ಕೊಡಬೇಕೆಂಬುದು ನನ್ನ ಅಭಿಪ್ರಾಯವಾಗಿದೆ. ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರು ಉಪಾಧ್ಯಕ್ಷರ ಪದವಿಗೆ ಏರಿರುವುದು ನಮ್ಮೆಲ್ಲರಿಗೂ ಬಹಳ ಸಂತೋಷ ಉಂಟು ಮಾಡಿದೆ. ಅವರು ಯಾವುದೇ ರೀತಿಯ ಪಕ್ಷಪಾತ ಮಾಡದೆ ಪ್ರಜಾಪ್ರಭುತ್ವ ನೀತಿಯನ್ನು ಎತ್ತ ಹಿಡಿಯುವುದಕೆ ಶ್ರಮಿಸಬೇಕೆಂದು ನಾನು ಹೇಳುತ್ತೇನೆ. ಉಪಾಧ್ಯಕ್ಷರಾಗಿರುವ ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರಿಗೆ ಎಲ್ಲಾ ರೀತಿಯಿಂದಲೂ ಸಹಕಾರವನ್ನು ನಾವೆಲ್ಲರೂ ಕೊಡುತ್ತೇವೆ. ಅವರೂ ಉತ್ತಮ ರೀತಿಯಲ್ಲಿ ಉಪಾಧ್ಯಕ್ಷ ಸ್ಥಾನದಲ್ಲಿ ಕೆಲಸ ಮಾಡುವಂತಾಗಲೆಂದು ನಾನು ಹಾರೈಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಸನ್ಮಾನ್ಯ ಅಧ್ಯಕ್ಷರೇ, ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರು ಈ ಮನೆಯ ಉಪಾಧ್ಯಕ್ಷಣಿಯಾಗಿ ಸರ್ವಾನುಮತದಿಂದ ಆಯ್ಕೆ ಆಗಿರುವುದು ನಮ್ಮೆಲ್ಲರಿಗೂ ತುಂಬಾ ಸಂತೋಷದ ವಿಷಯವಾಗಿದೆ. ಬಹುಶಃ ಅಧ್ಯಕ್ಷ ಸ್ಥಾನದಲ್ಲಿ ಕುಳಿತುಕೊಳ್ಳುವಂಥ ಹಿರಿಯ ವ್ಯಕ್ತಿಗಳಿಗೆ ತುಂಬಾ ಸಂಯಮ ಬೇಕಾಗುತ್ತದೆ. ಶಾಂತ ಸ್ವಭಾವ ಬೇಕಾಗುತ್ತದೆ. ಸಹಜವಾಗಿ ಮಹಿಳೆಯರಿಗೆ ಭಗವಂತನು ಹೆಚ್ಚು ಸಂಯಮ ಮತ್ತು ಶಾಂತ ಸ್ವಭಾವವನ್ನು ಕೊಟ್ಟಿದ್ದಾನೆ. ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರು ತುಂಬಾ ಶಾಂತ ಸ್ವಭಾವದ ಮಹಿಳೆಯಾಗಿದ್ದಾರೆ. ಇಂಥವರು ಅಂಥ ಉನ್ನತ ಸ್ಥಾನಕ್ಕೆ ಏರಿರುವುದು ನಮಗೆ ಬಹಳ ಸಂತೋಷ ಉಂಟಾಗಿದೆ. ಇವರು ಈ ಹಿಂದೆಯೂ ಶಿಕ್ಷಣ ಸಚಿವೆಯಾಗಿ ಸಾಕಷ್ಟು ಅನುಭವವನ್ನು ಹೊಂದಿದ್ದಾರೆ. ಈ ಸದನದಲ್ಲಿ ಬಹಳಷ್ಟು ಜನ ಹೊಸ ಸದಸ್ಯರು ಆಯ್ಕೆಯಾಗಿ ಬಂದಿದ್ದಾರೆ ಹೊಸಬರು ಮತ್ತು ಹಳಬರು ಎಂದು ತಾರತಮ್ಯ ಮಾಡದೆ ಎಲ್ಲರಿಗೂ ನ್ಯಾಯವಾದ ರೀತಿಯಲ್ಲಿ ಮಾತನಾಡುವುದಕ್ಕೆ ಅವಕಾಶವನ್ನು ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರು ಕಲ್ಪಿಸಿಕೊಡುತ್ತಾರೆಂದು ನಾನು ತಿಳಿದು ಕೊಂಡಿದ್ದೇನೆ ಸನ್ಮಾನ್ಯ ಕೆ. ಜೆಚ್. ಪಾಟೀಲರವರು ಮಾತನಾಡುತ್ತಾ ಉಪಾಧ್ಯಕ್ಷರನ್ನು ಆಯ್ಕೆ ಮಾಡುವಂಥ ಸಂದರ್ಭದಲ್ಲಿ ಹಿಂದಿನ ಸರ್ಕಾರದವರು ವಿರೋಧಪಕ್ಷವನ್ನು ಕೇಳದೇ ಇದ್ದುದರಿಂದ ಅದೇ ಪರಂಪರೆಯನ್ನು ಅನುಸರಿಸಿ ನಾವೂ ಮಾಡಿದ್ದೇವೆಂದು ಹೇಳಿದ್ದಾರೆ, ಬಹುಶಃ ಇವತ್ತಿನ ದಿವಸಗಳಲ್ಲಿ ರಾಜಕೀಯ ಬದಲಾವಣೆಗಳು ನಮ್ಮ ದೇಶದಲ್ಲಿ ತ್ವರಿತವಾಗಿ ಬದಲಾವಣೆಗಳಾಗಿವೆ. ಇಡೀ ದೇಶದಲ್ಲಿ ರಾಜಕೀಯ ಬದಲಾವಣೆ ಕಾಣುತ್ತಿರುವ ಈ ಕಾಲದಲ್ಲಿ ಉಪಾಧ್ಯಕ್ಷರ ಆಯ್ಕೆ ಸಂಬಂಧದಲ್ಲಿ ವಿರೋಧ ಪಕ್ಷದವರೊಡನೆ ಮಾತನಾಡಿ ಆಯ್ಕೆ ಮಾಡುವುದು ಒಂದು ಒಳ್ಳೆಯ ಸಂಪ್ರದಾಯವಾಗುತ್ತಿತ್ತು. ಲೋಕಸಭೆಯಲ್ಲಿ ಹಾಗೂ ಬೇರೆ ಬೇರೆ ಕಡೆಗಳಲ್ಲಿ ಈ ಒಂದು ಸಂಪ್ರದಾಯವನ್ನು ಅನುಸರಿಸುತ್ತಿದ್ದಾರೆ ಆದರೂ ಕೊನೆಯ ಪಕ್ಷ ಒಳ್ಳೆಯ ವ್ಯಕ್ತಿಯನ್ನು ಉಪಾಧ್ಯಕ್ಷರ ಸ್ಥಾನಕ್ಕೆ ಕೊಡುವಂಥ ಪ್ರಯತ್ನವನ್ನು ಮಾಡಿದ್ದಿರಿ. ಇದಕ್ಕೆ ನಾವು ಎಲ್ಲಾ ರೀತಿಯ ಸಹಕಾರ ಕೊಡುವುದಕ್ಕೆ ತಯಾರಿದ್ದೇವೆ. ಅವರಿಗೂ ಸಹ ಈ ಸದನದ ಕಾರ್ಯಕಲಾಪಗಳನ್ನು ಉತ್ತಮ ರೀತಿಯಲ್ಲಿ ನಡೆಸಿಕೊಂಡು ಹೋಗುವುದಕ್ಕೆ ದೇವರು ಶಕ್ತಿ ಕೊಡಲೆಂದು ಹಾರೈಸಿ ಳ ಮಾತುಗಳನ್ನು ಆಡುವುದಕ್ಕೆ ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀಮತಿ ಚಂದ್ರಪ್ರಭಾ ಏರಸ್ (ಹುಣಸೂರು).—ಸನ್ಮಾನ್ಯ ಸಭಾಧ್ಯಕ್ಷರೇ, ಶ್ರೀಮತಿ ನಾಗಮ್ಮ ಕೇಶವಮೂರ್ತಿ ಅವರನ್ನು ಈ ಸಭೆಯ ಉಪಾಧ್ಯಕ್ಷೆಯವರನ್ನಾಗಿ ಸರ್ವಾನುಮತ ದಿಂದ ಆರಿಸಿದ್ದಕ್ಕಾಗಿ ಮತ್ತು ಅವರು ಆ ಒಂದು ಪೀಠವನ್ನು ಪಡೆದುದಕ್ಕಾಗಿ ನಾನು

ತಮ್ಮೆಲ್ಲರ ಪರವಾಗಿ ಮತ್ತು ವಿಶೇಷತಃ ಮಹಿಳೆಯರ ಪರವಾಗಿ ಅವರನ್ನು ಅತ್ಯಂತ ಹೃದಯ ಪೂರ್ವಕವಾಗಿ ನಾನು ಅಭಿನಂದಿಸುತ್ತೇನೆ. ಈ ಮನೆಯ ಹಿರಿಯ ಸದಸ್ಯಣಿಯಾಗಿರುವರಾದ ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರು ಅತ್ಯಂತ ದಕ್ಷತೆಯುಳ್ಳವರಾಗಿದ್ದಾರೆ. ಅವರು ಪ್ರಥಮವಾಗಿ ೧೯೭೨ನೇ ಇಸವಿಯಲ್ಲಿ ದಾವಣಗೆರೆ ಕ್ಷೇತ್ರದಿಂದ, ೧೯೭೮ನೇ ಇಸವಿಯಲ್ಲಿ ಮಾಯಕೊಂಡ ಕ್ಷೇತ್ರದಿಂದ ಶಾಸಕಿಯವರಾಗಿ ಆಯ್ಕೆಯಾಗಿದ್ದರು. ೧೯೭೯–೮೨ನೇ ಇಸವಿಯ ಅವಧಿಯಲ್ಲಿ ಶಿಕ್ಷಣ ರಾಜ್ಯ ಸಚಿವೆಯವರಾಗಿ ಒಳ್ಳೆಯ ಕೆಲಸಗಳನ್ನು ಮಾಡಿದ್ದಾರೆ. ಅದಕ್ಕಿಂತಲೂ ಹೆಚ್ಚಾಗಿ ನಮ್ಮ ಹಿರಿಯ ಸದಸ್ಯರಾದ ಶ್ರೀ ಕೆ. ಹೆಚ್. ಪಾಟೀಲ್‌ರವರು ಹೇಳಿದ ಹಾಗೆ ಸಮಾಜವಾದದ ತಿರುಳನ್ನು ಅನುಷ್ಠಾನಕ್ಕೆ ತಂದು ಗ್ರಾಮಾಂತರ ಪ್ರದೇಶಗಳಲ್ಲಿ ಗ್ರಾಮೀಣ ಮಹಿಳೆಯರನ್ನು ಒಟ್ಟುಗೂಡಿಸಿಕೊಂಡು ಅನೇಕ ಸಂಘ ಸಂಸ್ಥೆಗಳನ್ನು ರಚನೆ ಮಾಡಿ ಅದರಲ್ಲಿ ಸ್ವಯಂಸೇವಕಿಯಾಗಿ ಸಮಾಜ ಸೇವೆಯನ್ನು ಸಲ್ಲಿಸಿಕೊಂಡು ಬಂದಿದ್ದಾರೆ. ಸ್ಟೇಟ್ ಅಸಿಸ್ಟೆಂಟ್ ಕಮಿಶನರ್ ಫಾರ್ ಗೈಡ್ಸ್ ಮತ್ತು ಇನ್ನೂ ಅನೇಕ ಅಖಿಲ ಭಾರತ ಮಟ್ಟದ ಸಂಘ-ಸಂಸ್ಥೆಗಳಲ್ಲಿ ಪದಾಧಿಕಾರಿಗಳಾಗಿ ಕಾರ್ಯನಿರ್ವಹಿಸಿದ್ದಾರೆ. ಇವೊತ್ತಿನ ದಿವಸ ನಮ್ಮ ಪ್ರತಿಪಕ್ಷದಲ್ಲಿ ಮಹಿಳೆಯರು ಇಲ್ಲದಿರತಕ್ಕಂಥ ಒಂದು ಸಂದರ್ಭದಲ್ಲಿ ಮಾನ್ಯರು ಆ ಕಡೆಗೆ ಹೋಗಿ ಸ್ಥಾನವನ್ನು ಅಲಂಕರಿಸಿರುವುದು ಸುದೈವದ ಸಂಗತಿಯಾಗಿದೆ. ಸದನದ ಎಲ್ಲಾ ಸದಸ್ಯರ ಪರವಾಗಿಯೂ ಕೆಲಸ ಮಾಡತಕ್ಕಂಥ ಮತ್ತು ಈ ಸಭೆಗೆ ಹೆಚ್ಚಿನ ಶೋಭೆಯನ್ನು ತಂದು ಕೊಡತಕ್ಕಂಥ ಒಂದು ಸ್ಥಾನವನ್ನು ಅಲಂಕರಿಸಿದ ಈ ಸಮಯದಲ್ಲಿ ತಮ್ಮನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಆ ಸ್ಥಾನವನ್ನು ಅಲಂಕರಿಸಿದ ತಾವುಗಳು ಅತ್ಯಂತ ಗೌರವಯುತವಾಗಿ ಕೆಲಸ ಮಾಡುತ್ತೀರಿ ಎಂದು ಭರವಸೆಯನ್ನು ಹೊಂದಿ. ಮಹಿಳೆಯರಿಗೆ ಗೌರವ ಸ್ಥಾನಮಾನಗಳನ್ನು ಕೊಟ್ಟು ಕೊಂಡು ಬರುತ್ತಿರುವುದು ಈ ರಾಜ್ಯದ ಸತ್‌ಸಂಪ್ರದಾಯ. ಇನ್ನು ಮುಂದೆಯೂ ಕೂಡ ನಮ್ಮ ಸರಕಾರದವರು ಹೆಚ್ಚಿನ ಅವಕಾಶವನ್ನು ಮಹಿಳೆಯರಿಗೆ ಕೊಡುವಂತಾಗಲಿ ಎಂದು ಆಶಿಸಿ ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರಿಗೆ ಶುಭವನ್ನು ಹಾರೈಸುತ್ತೇನೆ.

ಶ್ರೀಮತಿ ರೇಣುಕಾ ರಾಜೇಂದ್ರನ್ (ಚಿಕ್ಕಬಳ್ಳಾಪುರ).—ಸನ್ಮಾನ್ಯ ಸಭಾಧ್ಯಕ್ಷರೆ, ಈಗತಾನೆ ನೂತನವಾಗಿ ಉಪಸಭಾಧ್ಯಕ್ಷೆಯವರಾಗಿ ಆಯ್ಕೆಯಾದಂಥ ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಾ ಕೆಲವು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದು ತನಕ ಈ ಕಡೆಯವರಿಗೆ ಹತ್ತಿರವಾಗಿದ್ದ ಅವರು ಇವೊತ್ತಿನಿಂದ ನಮ್ಮಿಂದ ಬಹಳಷ್ಟು ದೂರ ಹೋಗಿದ್ದಾರಲ್ಲ ಎಂಬ ಭಾವನೆ ನಮಗೆ ಬಂದಿದೆ. ಮಹಿಳೆಯರ ಬಗ್ಗೆ ಅತ್ಯಂತ ಕಳಕಳಿ ಮತ್ತು ಕಾಳಜಿಯನ್ನು ಹೊಂದಿರುವ ಶ್ರೀಮತಿಯವರು ೧೯೭೨ನೇ ಇಸವಿಯಲ್ಲಿ ಈ ಮನೆಯ ಸದಸ್ಯೆಯಾಗಿ ಆಯ್ಕೆಯಾದರು. ಅದೇ ಸಮಯದಲ್ಲಿ ನಾನೂ ಕೂಡ ಈ ಮನೆಯ ಸದಸ್ಯೆಯಾಗಿ ಹೊಸಬಳಾಗಿದ್ದಾಗ ನನಗೆ ಅವರು ನೀಡಿದ ಮಾರ್ಗದರ್ಶನ ಮತ್ತು ಸಹಕಾರ ಹಾಗೂ ತಿಳುವಳಿಕೆಯನ್ನು ಕೊಟ್ಟ ವಿಧಾನ ಅವರ ಸಹೃದಯತೆಯು ಇನ್ನೂ ನನ್ನ ಮನಸ್ಸಿನ ಮೇಲೆ ಹಚ್ಚ ಹಸುರಾಗಿ ನೆನಪಿನಲ್ಲಿದೆ. ಅಂಥ ಸಂದರ್ಭದಲ್ಲಿ ಈ ಮನೆಯ ನೀತಿನಿಯಮಗಳನ್ನು ರೀತಿನೀತಿಗಳನ್ನು ಹೇಳಿಕೊಟ್ಟ ರೀತಿಯು ಅಚ್ಚಳಿಯದೆ ನನಗೆ ಇನ್ನೂ ನೆನಪಿದೆ. ಅದನ್ನು ಯಾವಾಗಲೂ ಮರೆಯಲು ಸಾಧ್ಯವಿಲ್ಲ. ಆದರಲ್ಲೂ ಮುಖ್ಯವಾಗಿ ಮಹಿಳೆಯರ ಬಗ್ಗೆ ಅವರಿಗಿದ್ದಂಥ ಪರಿಪೂರ್ಣ ಕಾಳಜಿ, ಮನಃಪೂರ್ವಕ ಕಳಕಳಿಯು ನಮ್ಮ ಮಹಿಳೆಯರು ಸ್ವಲ್ಪ ಮಟ್ಟಿಗೆ ಸುಧಾರಿಸುವಂತೆ ಮಾಡಿದೆ. ಮಾಯಕೊಂಡ, ದಾವಣಗೆರೆಗಳಲ್ಲಿ ಅನೇಕ ಮಹಿಳಾ ಸಂಘ ಸಂಸ್ಥೆಗಳನ್ನು ಅವರು ಸ್ಥಾಪನೆ ಮಾಡಿದ್ದಾರೆ. ಹಿಂದಿನ ಸರಕಾರಗಳಲ್ಲಿ ಇವರು ಸದಸ್ಯಣಿಯವರಾಗಿದ್ದಾಗ ಮಹಿಳೆಯ ಸಮಸ್ಯೆಗಳು ಬಂದಾಗ, ಮಹಿಳೆಯರ ಪರವಾಗಿ ಮಾತನಾಡತಕ್ಕಂಥ ಅನುಭವಿ ಸದಸ್ಯೆಯಾಗಿದ್ದರು. ಇಂಥವರು ಇವೊತ್ತಿನ ದಿವಸ ಆ ಸ್ಥಾನಕ್ಕೆ ಆಯ್ಕೆಯಾದುದು ಒಂದು ರೀತಿಯಲ್ಲಿ ಮಹಿಳೆಯರಿಗಾದ ನಷ್ಟ ಎಂದೂ ಹೇಳಬಹುದು. ಹಿಂದಿನ ಎರಡು—ಮೂರು ಸರಕಾರಗಳಲ್ಲಿ ನಮ್ಮ ಪಕ್ಷದವರು ಮಹಿಳೆಯರಿಗೆ ಹೆಚ್ಚಿನ ಆದ್ಯತೆಯನ್ನು ಕೊಟ್ಟಿದ್ದರು. ಈ ಹಿಂದೆ ೧೯೭೨ರಲ್ಲಿ ಶ್ರೀಮತಿ ನಾಗರತ್ನಮ್ಮನವರು ಈ ಸಭೆಯ ಗೌರವಯುತ ಅಧ್ಯಕ್ಷಣಿಯವರಾಗಿ ದಕ್ಷ ರೀತಿಯಲ್ಲಿ ಕೆಲಸಕಾರ್ಯಗಳನ್ನು ನಿರ್ವಹಣೆ ಮಾಡಿ ಒಂದು ಇತಿಹಾಸವನ್ನೇ ಸೃಷ್ಟಿಸಿದರೆಂದು ನಾವು ಭಾವಿಸಿದೆವು.

ತದನಂತರ ಬಂದ ಗುಂಡೂರಾಯರ ಸರ್ಕಾರದಲ್ಲಿ ವಿಧಾನಪರಿಷತ್ತಿನಲ್ಲಿ ಮಹಿಳೆಯರನ್ನು ಸಭಾಪತಿಯನ್ನಾಗಿ ಮಾಡುವ ಮೂಲಕ ಒಂದು ಇತಿಹಾಸವನ್ನು ಸೃಷ್ಟಿಮಾಡಿದರು. ಅವರಿಬ್ಬರೂ ಉತ್ತಮವಾದ ರೀತಿಯಲ್ಲಿ ಸೇವೆ ಮಾಡಿ ಒಳ್ಳೆಯ ಹೆಸರನ್ನು ಗಳಿಸಿದರು. ಹಿಂದೆ ಶ್ರೀಮತಿ ಸುಮತಿ ಪಾಂಡಿಮನ್ ಅವರು ಈ ಜಾಗದಲ್ಲಿದ್ದು ಒಳ್ಳೆಯ ಹೆಸರು ತಂದರು. ಇವತ್ತು ತಾವು ಸರ್ವಾನುಮತದಿಂದ ಈ ಜಾಗಕ್ಕೆ ಆಯ್ಕೆಯಾಗಿರುವ ತಮಗೆ ನಮ್ಮೆಲ್ಲರೆ ಹಾರ್ದಿಕ ಶುಭಾಶಯಗಳನ್ನು ತಿಳುಪಿಸುತ್ತಾ ಇಪ್ಪೂ ದಿವಸ ಮಹಿಳೆಯರಿಗಾಗಿ ನೀವು ಏನು ಕಾರ್ಯಕ್ರಮ ಕಾಳಜಿ

ವಹಿಸುತ್ತಿದ್ದಿರೋ ಅದನ್ನೇ ಮತ್ತೆ ಮಂದುವರಿಸಿಕೊಂಡು ಹೋಗಬೇಕೆಂದು ಕೇಳಿಕೊಂಡು, ಈ ಸಭೆಯನ್ನು ಜಾಣತನದಿಂದ ನಡೆಸಿ ಹೆಚ್ಚಿನ ಯಶಸ್ಸನ್ನು ಗಳಿಸುತ್ತೀರೆಂಬ ನಂಬಿಕೆಯನ್ನು ಇಟ್ಟು ಕೊಂಡು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು).—ಅಧ್ಯಕ್ಷರೇ, ಶ್ರೀಮತಿ ನಾಗಮ್ಮ ಕೇಶವಮೂರ್ತಿ ಅವರು ಉಪಾಧ್ಯಕ್ಷರಾಗಿ ಆಯ್ಕೆಯಾಗಿರುವುದು ಒಳ್ಳೆಯ ಸುದ್ದಿ, ನಾನು ಸಹ ವಿಧಾನ ಪರಿಷತ್ತಿನಲ್ಲಿ ೪ ವರ್ಷ ಕಾಲ ಸಭಾಪತಿಯಾಗಿದ್ದೆ. ನನ್ನ ಅನುಭವದಲ್ಲಿ ಹೇಳಬೇಕೆಂದರೆ ಆ ಕುರ್ಚಿ ಏನಿದೆ, ಅದು ಸುಖದ ಸುಪ್ಪತ್ತಿಗೆಯಲ್ಲ, ಮುಳ್ಳಿನ ಹಾಸಿಗೆ ಕಾರಣವಷ್ಟೆ. ಅಲ್ಲಿ ಕೂತ ಮೇಲೆ ಸರ್ವೇ ಸಾಧಾರಣವಾಗಿ ತಾಳ್ಮೆ ಇರಲೇಬೇಕು. ನಾವು ಎಷ್ಟು ತಾಳ್ಮೆಯಿದ್ದರೆ ಅಷ್ಟು ಸುಲಭವಾಗಿ ಇಲ್ಲಿನ ಕೆಲಸಕಾರ್ಯಗಳು ಸುಗಮವಾಗಿ ನಡೆಯುತ್ತವೆ: ಕಾರಣ ಇಷ್ಟೆ. ನಾನು ಅಲ್ಲಿ ಸಭಾಪತಿಯಾಗಿದ್ದಾಗ ಘಟಾನು ಘಟಿಗಳಾದಂಥ ಶ್ರೀ ರಾಮಕೃಷ್ಣ ಹೆಗಡೆಯವರು ವಿರೋಧಪಕ್ಷದ ನಾಯಕರಾಗಿದ್ದರು ಬೊಮ್ಮಾಯಿ ಯವರು ವಿರೋಧಪಕ್ಷದ ನಾಯಕರಾಗಿದ್ದರು ಎ. ಕೆ. ಸುಬ್ಬಯ್ಯ, ಉಲ್ಲಾಳ್ ದಯಾನಂದಸಾಗರ್ ಪುಟ್ಟೂರು ಆನಂದರಾವ್ ಇಂಥ ಘಟಾನುಘಟಿಗಳ ಹತ್ತಿರ ಕೆಲಸ ನಿರ್ವಹಣೆ ಮಾಡಿಕೊಂಡುಬರಲು ನನಗೆ ಕಷ್ಟವಾಯಿತು. ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರಿಗೆ ಒಂದು ಗುಟ್ಟು ಹೇಳುತ್ತೇನೆ. ಅದೇನೆಂದರೆ, ಸಾಮಾನ್ಯವಾಗಿ ವಿರೋಧ ಪಕ್ಷದವರಿಗೆ ಮಾತನಾಡಲು ಹೆಚ್ಚು ಅವಕಾಶ ಕೊಡುತ್ತಿದ್ದೆ. ಇಲ್ಲದಿದ್ದರೆ ಅವರು ನಮಗೆ ಬೆವರಿಳಿಸಿಬಿಡುತ್ತಾರೆ. ೧೯೭೪-೭೮ರ ಅವಧಿಯಲ್ಲಿ ತುರ್ತುಪರಿಸ್ಥಿತಿ ಜಾರಿಯಲ್ಲಿತ್ತು. ಆಗ ವಿರೋಧ ಪಕ್ಷದ ನಾಯಕರನ್ನೆಲ್ಲ ವಿಧಾನಪರಿಷತ್ತಿಗೆ ಜೈಲುಗಳಿಂದ ಕರೆತರುತ್ತಿದ್ದರು. ವಿರೋಧ ಪಕ್ಷದ ನಾಯಕರಾಗಿದ್ದ ಶ್ರೀ ಸುಬ್ಬಯ್ಯನವರನ್ನು ಶ್ರೀ ರಾಮಕೃಷ್ಣ ಹೆಗಡೆಯವರನ್ನು ದಿನವೂ ಜೈಲಿನಿಂದ ಕರೆದುಕೊಂಡು ಬರುತ್ತಿದ್ದರು. ಆಗ ನಾನು ತಾಳ್ಮೆಯಿಂದ ಇದ್ದು ನಾನು ವಿರೋಧಪಕ್ಷದವರಿಗೆ ಹೆಚ್ಚು ಹೆಚ್ಚು ಅವಕಾಶ ಕೊಟ್ಟು ಒಳ್ಳೇ ಸಭಾಪತಿಯೆಂದು ಹೆಸರು ಗಳಿಸಿಕೊಂಡೆ. ಇದು ನನ್ನ ಗುಟ್ಟು. ಅಸೆಂಬ್ಲಿ ಅಧ್ಯಕ್ಷರಾಗಿ ಶ್ರೀಮತಿ ನಾಗರತ್ನಮ್ಮನವರು ಯಾವ ರೀತಿ ಒಳ್ಳೆಯ ಹೆಸರು ಮಾಡಿದರೋ ಅದೇ ರೀತಿ ಇವರೂ ಹೆಸರು ಗಳಿಸುತ್ತಾರೆಂಬ ನಂಬಿಕೆ ನನಗೆ ಇದೆ. ಈ ಕಡೆ ಇದ್ದ ೮ ಜನ ಮಹಿಳೆಯರ ಪೈಕಿ ಒಬ್ಬರು ಆ ಕಡೆ ಹೋದರು. ಇನ್ನುಳಿದ ೭ ಜನ ಮಹಿಳಾ ಸದಸ್ಯರಿಗೆ ಮಾತನಾಡಲು ಅವಕಾಶ ಕೊಟ್ಟ ಮೇಲೆ ಬೇಕಾದರೆ ನಮಗೆ ಇವರಂ ಅವಕಾಶ ಕೊಡಲಿ. ಒಟ್ಟಿನಲ್ಲಿ ಶ್ರೀಮತಿ ನಾಗಮ್ಮ ಕೇಶವಮೂರ್ತಿ ಅವರು ಬಹಳ ಮೃದು ಸ್ವಭಾವದವರು. ಕಾಂಗ್ರೆಸ್ ಪಕ್ಷದ ಕಚೇರಿಗೆ ಮಹಿಳಾ ಕನ್ವೀನರ್ ಆಗಿ ಇವರು ಬರುತ್ತಿದ್ದಾಗ ನಾನು ನೋಡುತ್ತಿದ್ದೆ. ಇವರು ಯಾವಾಗಲೂ ನಗುತ್ತಿದ್ದರು. ಕೋಪ ಮಾಡಿಕೊಂಡದ್ದೇ ಇಲ್ಲ. ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರು ಈ ಕುರ್ಚಿಯ ಮೇಲೆ ಕೂತಾಗಲೂ ಸಹ ನಗು ಮುಖದಿಂದ ಇದ್ದು ಎಲ್ಲ ಸದಸ್ಯರಿಗೂ ನಗುಮುಖದಿಂದಿರುವಂತೆ ಮಾಡಿ ವಿರೋಧಪಕ್ಷದವರನ್ನೂ ಸಹ ಸರಿಸಮಾನವಾಗಿ ನಡೆಸಿಕೊಂಡು ಹೋಗುತ್ತಾರೆಂದು ನಂಬಿದ್ದೇನೆ. ಇಲ್ಲಿ ಸಾಮಾನ್ಯವಾಗಿ ಉಪಾಧ್ಯಕ್ಷರಾದವರು ಹೆಚ್ಚು ಕಾಲ ಅಧ್ಯಕ್ಷರಿಗಿಂತ ಕೂತುಂಕೊಂಡಿರಬೇಕಾಗುತ್ತದೆ ಆದ್ದರಿಂದ ನಾವೆಲ್ಲರೂ ಕೂಡ ಅವರಿಗೆ ಸಹಕಾರ ಕೊಟ್ಟರೆ ಅವರಿಗೆ ಬ್ಲಡ್ ಪ್ರಶರ್ ಬರದಂತೆ ಮಾಡಬಹುದೆಂದು ನನ್ನ ನಂಬಿಕೆ.

೨-೦೦ ಪಿ. ಎಂ

† ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ).—ಮಾನ್ಯ ಅಧ್ಯಕ್ಷರೇ, ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರನ್ನು ಉಪಾಧ್ಯಕ್ಷರನ್ನಾಗಿ ಆಯ್ಕೆ ಮಾಡಿದ್ದಕ್ಕಾಗಿ ನಾನು ಬಹಳ ಅತ್ಯಂತ ಸಂತೋಷ ಪಡುತ್ತೇನೆ. ಮತ್ತೊಂದು ಮಾತು ಎಂದರೆ ಬಹಳ ನೋವು ಕೂಡಾ ಆಗುತ್ತಿದೆ.

ಒಬ್ಬ ಮಾನ್ಯ ಸದಸ್ಯರು.—ಏತಕ್ಕೆ ನೋವು ?

ಶ್ರೀ ವಾಟಾಳ್ ನಾಗರಾಜ್.—ಹೇಳ್ತೇನೆ. ಆ ನೋವು ಏನೆಂದು ಹೇಳುತ್ತೇನೆ. ಅವರ ಬಗ್ಗೆ ನನಗೆ ಬಹಳ ಗೌರವ ಇದೆ. ನಮ್ಮ ಅಧ್ಯಕ್ಷರನ್ನು ಈ ಸಭೆಯ ಅಧ್ಯಕ್ಷರನ್ನಾಗಿ ಮಾಡಿದಾಗ ಅವರು ಮಹಾಭಾರತದ ಕೃಷ್ಣ ಆಗಬೇಕು, ಮತ್ತೊಬ್ಬರು ಕೃಷ್ಣ ಆಗಬಾರದು ಎಂದು ನಾನು ಅವರಿಗೆ ಹೇಳಿದೆ. ಒಂದೊಂದು ಸಾರಿ ಅವರು ನಗಲಿಲ್ಲ ಎಂದು ಹೇಳಿದರೆ ನಮಗೆ ನೋವು ಬಂತು. ಏತಕ್ಕೆ ಇವತ್ತು ನಗಲಿಲ್ಲ ನಮ್ಮ ಪರಿಸ್ಥಿತಿ ಏನು ? ಅವರು ಯಾವಾಗಲೂ ಆ ಒಂದು ಸ್ಥಾನದಲ್ಲಿ ಕೂತು ನಗುತ್ತಿದ್ದರೆ ನಾವು ಸ್ವಲ್ಪ ಹೇಳಬಹುದು. ಅವರು ನಗಲಿಲ್ಲ, ಈ ಕಡೆ ತಿರುಗಲಿಲ್ಲ ಎಂದು ಹೇಳಿದರೆ

ನಮಗೆ ಬಹಳ ಕಷ್ಟವೇ ? ಅಧ್ಯಕ್ಷರು ಅವರು ಸಭೆಗೆ ಬಂದಾಗ ನಮ್ಮ ಕಡೆ ನೋಡಿ ಆ ಕಡೆ ತಿರುಗಿದರೆ ಒಳ್ಳೆಯದು. ಅವರು ಯಾವಾಗ ನಮ್ಮ ಕಡೆ ತಿರುಗಲಿಲ್ಲ ಎಂದು ಹೇಳಿದರೆ ಏನೋ ಕೋಪದಲ್ಲಿದ್ದಾರೆ, ನಾವು ಏನು ಮಾಡಬೇಕು ಎನ್ನತಕ್ಕಂಥ ಪ್ರಶ್ನೆ ಬರುತ್ತದೆ. ಆದುದರಿಂದ ಆ ಸ್ಥಾನದಲ್ಲಿರತಕ್ಕಂಥವರು ನಗಂತಿರಬೇಕಾಗುತ್ತದೆ. ನಮ್ಮ ಅಧ್ಯಕ್ಷರ ಬಗ್ಗೆ ನನಗೆ ಅಪಾರವಾದ ಗೌರವ ಇದೆ, ನಾನು ಈ ಸಭೆಯಲ್ಲೂ ಅವರನ್ನು ಅವತ್ತೂ ಹೊಗಳಿದ್ದೇನೆ, ಮುಂದೆಯೂ ಹೊಗಳುತ್ತೇನೆ. ಅವರು ಒಬ್ಬ ಅಧ್ಯಕ್ಷರಾಗಿ ಒಳ್ಳೆಯ ಪರಂಪರೆಯನ್ನು ನಿರ್ಮಾಣ ಮಾಡಿದ್ದಾರೆ. ಮತ್ತು ಮಾಡಿಕೊಂಡು ಕೂಡಾ ಹೋಗುತ್ತಾರೆ. ಅವರು ಇಡೀ ದೇಶದಲ್ಲಿಯೇ ಒಬ್ಬ ಆದರ್ಶವಾದಂಥ ಅಧ್ಯಕ್ಷರಾಗುವುದರಲ್ಲಿ ಯಾವ ಅನುಮಾನವೂ ಇಲ್ಲ. ನಮಗೂ ಅವರಿಗೂ ಒಂದೊಂದು ಸಾರಿ ಅಲ್ಲಿದ್ದಾಗ ವಾದಗಳಾಗುತ್ತವೆ, ನಾವು ಕೂಡಾ ಅವರ ಬಗ್ಗೆ ವಾದ ಮಾಡಬಹುದು. ನಾನು ಮಾನ್ಯ ಅಧ್ಯಕ್ಷರಲ್ಲಿ ಕಳಕಳಿಯಿಂದ ಕೇಳಿಕೊಳ್ಳುವುದೇನೆಂದರೆ, ಆ ಒಂದು ಸ್ಥಾನದಲ್ಲಿ ಅವರು ಯಾವಾಗಲೂ ನಗುತ್ತಿರಬೇಕು ಹಿಂದೆ ಒಂದು ಭವಿಷ್ಯ ಇರಬಹುದು, ಅಥವಾ ಒಂದು ರಾಶಿ ಇರಬಹುದು. ಏಕೆಂದರೆ . ಇಲ್ಲಿ ' ನಾ ' ಎನ್ನತಕ್ಕಂಥವರು ಬರುತ್ತಾರೆ ನಾಗರತ್ನಮ್ಮನವರು ಅಲ್ಲಿಗೆ ಬಂದಿದ್ದರು, ಈಗ ನಾಗಮ್ಮ ಕೇಶವಮೂರ್ತಿಯವರು ಬರುತ್ತಿದ್ದಾರೆ. ನಾಗರತ್ನಮ್ಮನವರು ಅಧ್ಯಕ್ಷರನ್ನಾಗಿ ಮಾಡಿದಾಗ ದೇವರಾಜ ಅರಸ್‌ರವರಿಗೆ ನಾನು ಹೇಳಿದೆ, ನಮಗೆ ಬಹಳ ತೊಂದರೆ ಕೊಟ್ಟುಬಿಟ್ರಿ ಎಂದು ದೇವರಾಜ ಅರಸ್‌ರವರಿಗೆ ಹೇಳಿದೆ, ನಾನು ಆಗ ಈ ಸಭೆಯಲ್ಲಿಯೇ ಸದಸ್ಯನಾಗಿದ್ದೆ ಅವರು ಅಲ್ಲಿಗೆ ಬಂದು ಕುಳಿತಾಗ ಯಾವ ರೀತಿ ವಾದವನ್ನು ಮಾಡೋಣ. ಮಹಿಳೆಯರು ಅಲ್ಲಿ ಕುಳಿತಿದ್ದಾಗ ನಮ್ಮ ಪರಿಸ್ಥಿತಿಯೆದ್ದು ಮಾಡುವುದು, ಗುದ್ದಾಡುವುದು ನಮಗೆ ಆಗುವುದಿಲ್ಲ. ಆಗ ನಾವು ಅವರ ಮುಖವನ್ನು ನೋಡದೆ ಈ ರೀತಿ ತಿರುಗಿಕೊಂಡು ಮಾತನಾಡಬೇಕಾಗುತ್ತದೆ, ಅವರ ಮುಖ ನೋಡಿದರೆ ಏನೂ ಮಾತನಾಡುವುದಕ್ಕಾಗುವುದಿಲ್ಲ. ಅಂಥ ಪರಿಸ್ಥಿತಿ ಬರುತ್ತದೆ. ನಾಗಮ್ಮ ಕೇಶವಮೂರ್ತಿಯವರನ್ನು ತಾವು ಎಲ್ಲರೂ ಉಪಾಧ್ಯಕ್ಷರನ್ನಾಗಿ ಮಾಡಿರುವುದರಿಂದ ನಮ್ಮ ಶಕ್ತಿ ಸ್ವಲ್ಪ ಕಡಿಮೆ ಆಯಿತು. ನಾವು ಏನೋ ಗದ್ದಲ ಮಾಡಬೇಕು ಎಂದು ಇರುತ್ತೇವೆ, ತಕ್ಷಣವೇ ಅವರ ಮುಖ ನೋಡಿದರೆ ಆ ಗದ್ದಲವೆಲ್ಲಾ ಹೊರಟು ಹೋಗುತ್ತದೆ ಆದುದರಿಂದ ಇನ್ನು ಮುಂದೆ ನಾಗಮ್ಮ ಎನ್ನುವುದನ್ನು ಬಿಟ್ಟು ಕೇಶವಮೂರ್ತಿ ಎಂದು ಇಟ್ಟುಕೊಳ್ಳಬೇಕು. ಏಕೆಂದರೆ ನಾಗಮ್ಮನವರನ್ನು ನೋಡಿದರೆ ಏನೂ ಮಾತನಾಡುವುದಕ್ಕಾಗುವುದಿಲ್ಲ. ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರನ್ನು ಉಪಾಧ್ಯಕ್ಷರನ್ನಾಗಿ ಮಾಡಿರುವುದರಿಂದ ನಮ್ಮ ಶಕ್ತಿಯನ್ನು ಅರ್ಧ ಕಡಿಮೆ ಮಾಡಿದಿರಿ. ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರು ಯೋಗ್ಯರು, ನೀತಿವಂತರು, ಈ ನಾಡಿನಲ್ಲಿ ಒಳ್ಳೆಯ ಪರಂಪರೆಯನ್ನು ಅವರು ಇಟ್ಟುಕೊಂಡು ಬಂದಿದ್ದಾರೆ ಮತ್ತು ಮಹಿಳೆಯರ ಕುಲಕ್ಕೆ ಒಂದು ಅಪಾರವಾದಂಥ ಗೌರವವನ್ನು ತಾವು ತಂದುಕೊಟ್ಟಿದ್ದೀರಿ. ಈ ಮಹಿಳೆಯರನ್ನು ಒಂದೊಂದು ರೀತಿಯಲ್ಲಿ ತಾವು ನೋಡಿದ್ದೀರಿ. ಅವರು ದರ್ಗಿ ಆಗಬಹುದು, ಮಾರಿ ಆಗಬಹುದು, ದಾಸಿಣಿ ಆಗಬಹುದು, ಇತಿಹಾಸದಲ್ಲಿ, ಆ ರೀತಿಯೆಲ್ಲಾ ಆಗಬಹುದು, ಮಹಿಳೆ ವನಿದರೆ, ಮಾರಿ, ವನಿಯದಿದ್ದರೆ ನಾರಿ...

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಕನ್ನಡವೆಲ್ಲಾ ಮರೆತುಹೋಗಿದೆ, " ಒಲಿದರೆ ನಾರಿ, ಮುನಿದರೆ ಮಾರಿ "

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಈ ವಿಚಾರದಲ್ಲಿ ಏನೋ ಸ್ವಲ್ಪ ವ್ಯತ್ಯಾಸ ಆಗಿದೆ, ದಯವಿಟ್ಟು ಅದನ್ನು ರಿಪೇರಿ ಮಾಡಿಕೊಂಡು ಬಂದು ಆಮೇಲೆ ಹೇಳಬಹುದು.

ಶ್ರೀ ಹರ್ಷಕುಮಾರಗೌಡ.—ಅವರು ಹೇಳಿದ ಹಾಗೆ ಈಗಾಗಲೇ ಅರ್ಧ ಹೆದರಿದ್ದಾರೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.—ಒಲಿದರೆ ನಾರಿ, ಮುನಿದರೆ ಮಾರಿ. ಈ ಸ್ಥಾನವನ್ನು ತೊರೆದು ಎಂದೂ ಮುನಿಯದೇ ಈ ಸ್ಥಾನವನ್ನು ತಾವು ಅಲಂಕರಿಸಬೇಕು. ಅವರಲ್ಲಿ ನಾನು ಕಳಕಳಿಯಿಂದ ಮನವಿಯನ್ನು ಮಾಡಿ ಅವರಿಗೆ ಎಲ್ಲಾ ರೀತಿಯ ಬೆಂಬಲವನ್ನು ಕೊಡುತ್ತೇವೆ ಇವತ್ತು ವಿರೋಧ ಪಕ್ಷ ಮತ್ತು ಆಡಳಿತ ಪಕ್ಷ ಎನ್ನತಕ್ಕಂಥ ದೃಷ್ಟಿ ಇಲ್ಲ. ನಾನು ಮೊದಲೇ ಬಂದ ತಕ್ಷಣ ವಿರೋಧ ಪಕ್ಷದ ನಾಯಕರಿಗೆ ಹೇಳಿದ್ದೆ. ಅಲ್ಲಿ ಮತ್ತೊಬ್ಬರನ್ನು ನಿಲ್ಲಿಸಿ ನಾವು ಗೊಂದಲವನ್ನು ಮಾಡುವುದು ಬೇಡ. ದಯವಿಟ್ಟು ಅವರನ್ನೇ ಅವಿರೋಧವಾಗಿ ಆಯ್ಕೆ ಮಾಡಬೇಕು ಎನ್ನತಕ್ಕಂಥ

ಒಂದು ಸಂಪ್ರದಾಯವನ್ನು ಇಟ್ಟುಕೊಳ್ಳೋಣ ಎಂದು ಹೇಳಿದ್ದೇನೆ. ಆವರು ಈ ಒಂದು ಆಡಳಿತದಲ್ಲಿ ಯಶಸ್ವಿಯಾಗಲೀ, ಅವರು ಅಧಿಕಾರದಲ್ಲಿ ಯಶಸ್ವಿಯಾಗಲಿ ಎಂದು ಭಗವಂತನಲ್ಲಿ ಪ್ರಾರ್ಥಿಸಿಕೊಂಡು ನನಗೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀಮತಿ ಕೆ. ಎಸ್. ನಾಗರತ್ನಮ್ಮ(ಗುಂಡ್ಲುಪೇಟೆ).—ಮಾನ್ಯ ಅಧ್ಯಕ್ಷರೇ, ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರನ್ನು ಈ ಮನೆಯ ಎಲ್ಲ ಸದಸ್ಯರೂ ಒಟ್ಟಾರೆ ಸೇರಿ ಅವರನ್ನು ಉಪಾಧ್ಯಕ್ಷರನ್ನಾಗಿ ಮಾಡಿರುವುದು ಎಲ್ಲರಿಗೂ ಸಂತೋಷವನ್ನು ತಂದಿದೆ. ಹಾಗೂ ತಮಗೂ (ಅಧ್ಯಕ್ಷರನ್ನು ಉದ್ದೇಶಿಸಿ) ಹೆಚ್ಚಿನ ರೀತಿಯಲ್ಲಿ ಸಂತೋಷವನ್ನು ತಂದಿದೆ ಎಂದು ನಾನಾದರೂ ಭಾವಿಸಿಕೊಂಡಿದ್ದೇನೆ. ಏಕೆಂದರೆ ಅಧ್ಯಕ್ಷರಿಗೆ ಯಾವಾಗಲೂ ಒಬ್ಬರು ಸಹಾಯಕರು ಬೇಕಾಗುತ್ತಾರೆ. ತಮ್ಮ ಜಾಗದಲ್ಲಿ ಕೆಲಸ ಮಾಡುವವರು ಉತ್ತಮರಾಗಿ, ಸಮಾಧಾನಸ್ಥರಾಗಿ ಮತ್ತು ನಿಧಾನಸ್ಥರಾಗಿ ಇರಬೇಕಾಗುತ್ತದೆ. ಈ ಮೂರು ಕ್ವಾಲಿಟಿಗಳು ಬಹಳ ಮುಖ್ಯ. ಅದು ಯಾವ ಅಧ್ಯಕ್ಷರಿಗೂ ಬಹಳ ಮುಖ್ಯವಾಗಿರುತ್ತದೆ. ಆ ಮೂರು ಕ್ವಾಲಿಟಿಯನ್ನು ಅವರು ಹೊಂದಿದ್ದಾರೆ ಎಂದು ಹೇಳಿ ನಾನಾದರೂ ಅಂದುಕೊಂಡಿದ್ದೇನೆ. ನನ್ನ ಪ್ರಕಾರ ಅವರು ಮೂರು ಕ್ವಾಲಿಟಿಯನ್ನೂ ಹೊಂದಿರುವವರಾಗಿದ್ದಾರೆ. ಅಲ್ಲಿ ಪಿಠದಲ್ಲಿ ಕೂತಿರುವಷ್ಟಕ್ಕಂತ ಅಧ್ಯಕ್ಷರಿಗೆ ಯಾವ ಪಾರ್ಟಿಯೂ ಇರುವುದಿಲ್ಲ ಯಾವ ಪಂಗಡವೂ ಇರುವುದಿಲ್ಲ. ಅಲ್ಲಿ ಕೂತವರಿಗೆ ಹೆಣ್ಣು ಮಕ್ಕಳಾಗಲಿ ಗಂಡುಮಕ್ಕಳು ಆಗಲಿ ಎಲ್ಲರೂ ಒಂದೇ ಸಮ ಎಂದು. ನನ್ನ ೬ ವರ್ಷಗಳ ಅನುಭವದಲ್ಲಿ ನಾನು ಕಂಡುಕೊಂಡಿದ್ದೇನೆ. ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರು ಏನು ಅನುಭವ ಇಲ್ಲದವರೇನೂ ಅಲ್ಲ. ಆದರೂ ಸಹ ನಾನು ಅವರಿಗೆ ಒಂದಾ ಕವಿ ಮಾತು ಹೇಳುತ್ತೇನೆ. ಇಲ್ಲಿ ಮೇಲೆ ತಕ್ಕಡಿ ಇದೆ. ಜೊತೆಗೆ ಇಲ್ಲಿ ಸದಸ್ಯರೇ ಪಾಡಿಕೊಟ್ಟಿರುವಂತಹ ಕೆಲವು ರೂಲ್ಸ್ ಪುಸ್ತಕಗಳು ಇವೆ. ತಾವು ಬಹಳ ಮೃದು ಸ್ವಭಾವದವರು ಎಂದು ಎಲ್ಲರೂ ಹೇಳಿದರು. ಆದಾಗ್ಯೂ ಸಹ ತಾವು ತಮ್ಮ ಮೃದು ಸ್ವಭಾವವನ್ನು ತಾವು ಆ ಪೀಠದ ಮೇಲೆ ಕೂತಾಗ ತೋರಿಸಬಾರದು. ಅಲ್ಲಿ ಕಾಠಿತಾಗ ಸ್ವಲ್ಪ ಕಠಿಣವಾಗಿ ಇರಬೇಕಾಗುತ್ತದೆ. ರೂಲ್ಸ್ ಮತ್ತು ಕಾನೂನು ಬ್ಲಾಕ್ಟಿನಲ್ಲಿ ತಾವು ಮಾಡಬೇಕಾದ ಕೆಲಸಗಳನ್ನು ಒಹಳ ಧೈರ್ಯದಿಂದ ಪಾಡಿದರೆ ಪಾತ್ರ ಈ ಸಭೆಯನ್ನು ಜೆನ್ನಾಗಿ ನಡಸಿಕೊಂಡು ಹೋಗವುದಕ್ಕೆ ಸಾಧ್ಯ ಆಗುತ್ತದೆ. ಇಲ್ಲದಿದ್ದರೆ ಒಹಳ ಗೊಂದಲ ಆಗಿ ಈ ಹೆಣ್ಣು ಮಕ್ಕಳ ಕೈಯಲ್ಲಿ ಏನೂ ಆಗುವುದಿಲ್ಲ ಎಲ್ಲರಿಗೂ ಮಾತನಾಡಲಿಕ್ಕೆ ಅವಕಾಶ ಕೊಡುತ್ತಾರೆ ಎಂಬ ಆಪಾದನೆ ಪಿಠಿತ್ತದೆ. ಅದಕ್ಕೆ ಅವಕಾಶ ಕೊಡದೆ ಬಹಳ ಧೈರ್ಯದಿಂದ, ದಿಟ್ಟತನದಿಂದ, ಸಮಾಧಾನಕರವಾಗಿ ಕೆಲಸ ಮಾಡುತ್ತೀರಿ ಎಂಬ ಭರವಸೆ ನನಗೆ ಜೆನ್ನಾಗಿ ಇದೆ. ದೇವರು ನಿಮಗೆ ಎಲ್ಲಾ ತರಹದ ಶಕ್ತಿ ಕೊಡಲಿ ಎಂದು ಹೇಳುತ್ತೇನೆ. ನಾವು ಅಚ್ಚುಕಟ್ಟಾಗಿ ಕೆಲಸ ಮಾಡಬೇಕು ಮೊಟ್ಟ ಮೊದಲನೆಯದಾಗಿ ಹೆಣ್ಣು ಮಕ್ಕಳಿಗೆ, ಆಮೇಲೆ ಮಾನ್ಯ ಸದಸ್ಯರಿಗೆ ಹಾಗೂ ಈ ಮನೆಗೆ ಗೌರವ ತರುವಂತಹ ಶಕ್ತಿಯನ್ನು ತಮಗೆ ಭಗವಂತ ಕೊಡಲಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ಬಂಗಾರಪ್ಪ(ಸೊರಬ) —ಮಾನ್ಯ ಸಭಾಧ್ಯಕ್ಷರೇ, ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರನ್ನು ನಾನು ಮೊಟ್ಟ ಮೊದಲನೆಯದಾಗಿ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ನಾವು ನಮ್ಮ ಸದನದ ಮುಖೇನ ಪ್ರಜಾ ಸಾರ್ವಭೌಮತ್ವವನ್ನು ಸಾರತಕ್ಕಂಥ ಸುಸಂದರ್ಭ ಮತ್ತೊಂದು ಸಾರಿ ನಮಗೆ ಸಿಕ್ಕಿದೆ. ಆದೂ ಕೂಡ ಒಬ್ಬ ಹೆಣ್ಣು ಮಗಳನ್ನು ಈ ಸ್ಥಾನಕ್ಕೆ ಕೂರಿಸಿ ಅದರ ಬೆಲೆಯನ್ನು ಜಾಸ್ತಿ ಮಾಡಿಕೊಂಡಿದ್ದೇವೆ ಎಂದು ನಾನು ಭಾವಿಸಿದ್ದೇನೆ. ಆ ಮಾತನ್ನು ಇಲ್ಲಿಯವರೆಗೆ ಮಾತನಾಡಿದ ಎಲ್ಲಾ ಭಾಗದ ಮಾನ್ಯ ಮಿತ್ರರು ಹೇಳಿದ್ದಾರೆ. ಅವರು ಸಮಾಧಾನವಾಗಿ ಇರಬೇಕು. ಎಂಬ ಮಾತನ್ನು ನಾವು ಪದೇ ಪದೇ ಹೇಳುತ್ತೇವೆ ಇಲ್ಲಿ ಅಧ್ಯಕ್ಷರಾಗಿ ಕೆಲಸ ಮಾಡಿರತಕ್ಕವರು ಶ್ರೀಮತಿ ನಾಗರತ್ನಮ್ಮನವರೂ ಸಹ ಇದ್ದಾರೆ. ಶ್ರೀಮಾನ್ ಚಂದ್ರೇಗೌಡರೂ ಸಹ ಹಿಂದೆ ಅಧ್ಯಕ್ಷರಾಗಿದ್ದರು. ತಾವು ಕೂಡ ಜೆನ್ನಾಗಿ ಕೆಲಸ ಮಾಡಿದ್ದೀರಿ. ತಾವು ಈಗ ವಿರೋಧ ಪಕ್ಷದ ನಾಯಕರಾಗಿ ಇದ್ದೀರಿ. ನಾವು ನಮ್ಮ ಸತ್ ಸಂಪ್ರದಾಯಗಳ ಹಿನ್ನೆಲೆಯಲ್ಲಿ ನಾವು ಯಾವಾಗಲೂ ಕರ್ನಾಟಕ ವಿಧಾನಸಭೆಯ ಅಂತಸ್ತನ್ನು ಯಾವಾಗಲೂ ಕಾಪಾಡಿಕೊಂಡು ಬರುವುದಲ್ಲದೆ ಅದನ್ನು ಮೇಲಕ್ಕೆ ಎತ್ತತಕ್ಕಂಥ ಕೆಲಸವನ್ನು ಮಾಡಿಕೊಂಡು ಬಂದಿದ್ದೇವೆ. ಕೆಲವೊಮ್ಮೆ ಇಲ್ಲಿ ವಿಷಯ ಗಳನ್ನು ಪ್ರತಿಪಾದನೆ ಮಾಡತಕ್ಕ ಸಂದರ್ಭದಲ್ಲಿ ಈ ಕಡೆ ಸದಸ್ಯರು ಇರಬಹುದು ಅಥವಾ ಆ ಕಡೆ ಕುಳಿತಿರತಕ್ಕವರು ಇರಬಹುದು. ಮುಖ್ಯವಾಗಿ ಹೆಚ್ಚಿನ ಮಾನಸಿಕ ಒತ್ತಡ ವಿರೋಧ ಪಕ್ಷದಲ್ಲಿ ಕುಳಿತುಕೊಂಡಿರುವವರಲ್ಲಿ ಇದ್ದೇ ಇರುತ್ತದೆ. ನಾವು ಅಲ್ಲಿ ಕುಳಿತುಕೊಂಡು ಕೆಲಸ ಮಾಡಿದ ಅನುಭವದಿಂದ ಈ ಮಾತನ್ನು ಹೇಳುತ್ತಿದ್ದೇನೆ. ಶ್ರೀಮಾನ್ ವೆಂಕಟಪ್ಪನವರು ಮಾತನಾಡುತ್ತಾ ಒಂದು ವಿಷಯ ಹೇಳಿದರು. ಅವರು ಮೇಲ್ಮನೆಯ ಸಭಾಪತಿಯವರಾಗಿದ್ದಾಗ ವಿರೋಧ

ಪಕ್ಷದವರಿಗೆ ಹೆಚ್ಚಿನ ಅವಕಾಶವನ್ನು ಕೊಡುತ್ತಿದ್ದೆ ಎಂದು ಹೇಳಿದ್ದು ಈ ಒಂದು ಅರ್ಥದಲ್ಲಿ ಎಂದು ನಾನು ಭಾವನೆ ಮಾಡುತ್ತೇನೆ. ಅವರು ಮಾತನಾಡುವಾಗ ತಮ್ಮ ಭಾವನೆಯನ್ನು ಪುನರುಕ್ತಿ ಮಾಡಿದರು. ಈ ಅಭಿಪ್ರಾಯದ ಹಿನ್ನೆಲೆಯಲ್ಲಿ ನಾವು ಕೆಲವು ಸಲ ವಿರೋಧ ಪಕ್ಷದವರಿಗೆ ಹೆಚ್ಚಿನ ಅವಕಾಶ ಕೊಟ್ಟರೆ ಅದು ತಪ್ಪೇನೂ ಆಗುವುದಿಲ್ಲ ಎಂದು ನನ್ನ ಭಾವನೆ.

ಅವರಲ್ಲಿ ಏನೂ ಅನುಮಾನ ಬೇಕಾಗಿಲ್ಲ. ಏಕೆಂದರೆ ಕೆಲವೊಮ್ಮೆ ವಿರೋಧ ಪಕ್ಷದ ಮಾನ್ಯ ಸದಸ್ಯರು ವಿಚಾರವನ್ನು ಪ್ರಸ್ತಾಪ ಮಾಡದೇ ಇದ್ದರೆ ಸರ್ಕಾರ ನಡೆಸತಕ್ಕವರು ಈ ಕಡೆ ಟ್ರೆಜರಿ ಬೆಂಚಿನಲ್ಲಿ ಕುಳಿತಿರತಕ್ಕವರಿಗೆ ಕೆಲವು ವಿಚಾರಗಳು ಗೊತ್ತಾಗುವುದಿಲ್ಲ. ಗೊತ್ತಿದ್ದಂತಹ ವಿಚಾರಗಳು ಸರಿ ಆದರೆ ಗೊತ್ತಿಲ್ಲದೇ ಇರತಕ್ಕ ವಿಚಾರಗಳನ್ನು ನಿಮ್ಮ ಗಮನಕ್ಕೆ ಜನರ ಪರವಾಗಿ ಅವರು ತರತಕ್ಕ ಸಂದರ್ಭ ಬರುತ್ತದೆ. ಅಂತಹ ಸಂದರ್ಭ ಬಂದಾಗ ಅದರ ಬಗ್ಗೆ ಮಾರ್ಗದರ್ಶನ ಕೊಡ ತಕ್ಕಂಥದ್ದು ಕೂಡ ಆ ಒಂದು ಜಾಗದಿಂದ ನಡೆಯಬೇಕಾಗುತ್ತದೆ. ನಮಗೆ ಗೊತ್ತಿರುವ ಹಾಗೆ ಸಮಾಧಾನದಿಂದ ಕೆಲಸ ಮಾಡತಕ್ಕವರು. ಅನುಭವದ ಹಿನ್ನೆಲೆಯಲ್ಲಿ ಕೆಲಸ ಮಾಡತಕ್ಕವರು ಇರುತ್ತಾರೆ. ಆದರೆ ಅನುಭವ ಇದ್ದವರನ್ನೇ ಪ್ರತಿ ಸಾರಿಯೂ ಅಲ್ಲಿ ಕೂರಿಸುವುದಕ್ಕೆ ಆಗುವುದಿಲ್ಲ. ಮುಂದೆ ಅನುಭವ ಪಡೆಯುವವರನ್ನೂ ಕೂಡ ನಾವು ಆ ಜಾಗದಲ್ಲಿ ಕೂರಿಸಬೇಕಾಗುತ್ತದೆ. ಮಾನ್ಯ ಕೃಷ್ಣರವರು, ತಮ್ಮ ಬಗ್ಗೆ ನಾನು ಹೇಳುತ್ತಿದ್ದೇನೆ. ಸಮಾಧಾನದ ವಿಚಾರದಲ್ಲಿ ನಿಮಗಿಂತ ಇನ್ನೂ ಹೆಚ್ಚಿನ ಸಮಾಧಾನವಿದ್ದವರು ಸಿಕ್ಕುವುದಿಲ್ಲ ಎನ್ನತಕ್ಕ ಭಾವನೆ ನನಗೆ ಈಗಾಗಲೇ ಬಂದುಬಿಟ್ಟಿದೆ. ನಿಜವಾಗಲೂ ಇದು ಸಮಾಧಾನದ ವಿಚಾರ. ನಿಯಮಾವಳಿಗಳ ಚೌಕಟ್ಟಿನಲ್ಲಿ ಕೆಲಸ ಮಾಡಬೇಕು ಎಂದು ಇದೆ; ಕೆಲವೊಮ್ಮೆ ದೃಢತೆಯಿಂದ ಕೆಲಸ ಮಾಡಬೇಕು ಎನ್ನತಕ್ಕ ಮಾತೂ ಇದೆ. ಸಮಾಧಾನದ ಜೊತೆಯಲ್ಲಿ ಅನುಭವದ ಹಿನ್ನೆಲೆಯೂ ಇರಬೇಕು ಎಂಬ ಮಾತನ್ನು ಶ್ರೀಮತಿ ನಾಗರತ್ನಮ್ಮನವರು ಆಡಿದರು. ಈ ಎರಡೂ ಕೂಡ ಸಮ್ಮಿಳನಗೊಳ್ಳಬೇಕಾಗುತ್ತದೆ. ಇಲ್ಲದೇ ಇದ್ದರೆ ಈ ಸದನದ ಕಾರ್ಯಕಲಾಪ ನಡೆಸುವುದು ಅಷ್ಟೇ ಕಷ್ಟವಾಗುತ್ತದೆ. ಈ ಜಾಗದ ಬಗ್ಗೆ ಹಿಂದಿನ ಒಂದು ಅನುಭವವನ್ನು ಹೇಳಿದರೆ ತಪ್ಪಾಗಲಾರದು ಎಂದು ನನ್ನ ಭಾವನೆ. ಬೆಳ್ತಂಗಡಿ ಕ್ಷೇತ್ರದಿಂದ ಆರಿಸಿ ಬಂದು ಇಲ್ಲಿ ಅಧ್ಯಕ್ಷರಾಗಿದ್ದಂಥ ದಿವಂಗತ ಶ್ರೀಮಾನ್ ವೈಕುಂಠ ಬಾಳಿಗಾರವರು ಅವರು ಆ ಸ್ಥಾನದಲ್ಲಿ ಕುಳಿತುಕೊಂಡಾಗ ಯಾರಾದರು ಒಂದು ಕ್ರಿಯಾಲೋಪ ಎತ್ತಿದಾಗ ಅದರ ಬಗ್ಗೆ ಅವರು ಓಪನ್ ಹೌಸ್‌ನಲ್ಲಿ ಡಿಸ್ಪೋಸ್ ಕೊಡುತ್ತಿದ್ದರು. ಹೈಕೋರ್ಟ್‌ನಲ್ಲೋ ಸುಪ್ರೀಂಕೋರ್ಟ್‌ನಲ್ಲೋ ಓಪನ್ ಕೋರ್ಟ್‌ನಲ್ಲಿ ಜಡ್ಜ್‌ಮೆಂಟ್ ಡಿಕ್ಟೇಷನ್ ಕೊಟ್ಟ ಹಾಗೆ ಅವರು ಕೊಡುತ್ತಿದ್ದರು. ಐಯ್ಯಂಗಾರ್‌ರವರ ಉಲ್ಲೇಖಗಳು. ಲೋಕಸಭಾ ಸ್ಪೀಕರ್‌ರವರ ಉಲ್ಲೇಖಗಳು, ಮತ್ತೊಂದು ಸದನದ ಉಲ್ಲೇಖಗಳು, ಮೌಸ್ ಆಫ್ ಕಾಮನ್ಸ್‌ನ ಉಲ್ಲೇಖಗಳು, ಇವನ್ನೆಲ್ಲಾ ಉಲ್ಲೇಖ ಮಾಡಿ ಓಪನ್ ಹೌಸ್‌ನಲ್ಲಿ ಡಿಕ್ಟೇಷನ್ ಕೊಡುತ್ತಿದ್ದುದನ್ನು ನಾವೆಲ್ಲಾ ಕಂಡಿದ್ದೇವೆ. ಇತ್ತೀಚೆಗೆ ಅದು ಸ್ವಲ್ಪ ಕಡಿಮೆಯಾಗಿದೆಯೇನೋ ಎನ್ನುವ ಭಾವನೆ ನನ್ನ ಮನಸ್ಸಿನಲ್ಲಿದೆ. ಈ ರೀತಿ ಓಪನ್ ಹೌಸ್‌ನಲ್ಲಿ ಬರಬೇಕು ಎಂದು ಅದರ ಅರ್ಥವಲ್ಲ. ಆದರೆ ರೂಲಿಂಗ್ ಕೊಡತಕ್ಕ ವಿಚಾರದಲ್ಲಿ ತಾವು ಛೇಂಬರಿಗೆ ಹೋಗಿ ಮಾಡಬೇಕಾಗುತ್ತದೆ. ಉಪಾಧ್ಯಕ್ಷರೂ ಮಾಡಬೇಕಾಗುತ್ತದೆ. ಪ್ರತಿಯೊಂದರ ಬಗ್ಗೆಯೂ ಇಲ್ಲೇ ತೀರ್ಮಾನ ಕೊಡುವುದಕ್ಕಾಗುವುದಿಲ್ಲ. ಆದರೆ ಎಲ್ಲವನ್ನೂ ಅಲ್ಲದೇ ಇದ್ದರೂ ನಿಯಮಾವಳಿ ಪ್ರಕಾರ ಬಹುತೇಕ ವಿಚಾರಗಳನ್ನು ಇಲ್ಲೇ ಇತ್ಯರ್ಥ ಮಾಡಿರತಕ್ಕದ್ದನ್ನು ನಾವೆಲ್ಲಾ ಕಣ್ಣಾರೆ ಕಂಡಿದ್ದೇವೆ. ಆ ಕಾಲ ಬಂದರೆ ಇನ್ನೂ ಒಳ್ಳೆಯದು ಆಗಬಹುದು ಎನ್ನತಕ್ಕದ್ದು ನನ್ನ ಆಸೆ. ನಾನೂ ಕೂಡ ದೂರದಿಂದ ನೋಡುತ್ತಾ ಇದ್ದೇನೆ. ಆಮೇಲೆ ಶ್ರೀಮಾನ್ ಕೊಠಾವಳಿಯವರು ತಮ್ಮ ಜಾಗಕ್ಕೆ ಬಂದರು: ಅವರೂ ಕೂಡ ಕಾನೂನು ವಿಚಾರದಲ್ಲಿ ತಜ್ಞರಾಗಿದ್ದರು. ತಮ್ಮ ಬಗ್ಗೆಯಂತೂ ಕಾನೂನು ವಿಚಾರದಲ್ಲಿ ಹೇಳಬೇಕಾಗಿಲ್ಲ. ತಮಗೆ ಆ ಜ್ಞಾನ ಸಂಪೂರ್ಣವಾಗಿದೆ. ತಮ್ಮ ಮಾರ್ಗದರ್ಶನದಲ್ಲಿ ಉಪಾಧ್ಯಕ್ಷರೂ ಕೂಡ ಹೋಗತಕ್ಕ ಸಂದರ್ಭ ಬರುತ್ತದೆ. ಹಲವಾರು ವಿಚಾರಗಳಲ್ಲಿ ಅನುಭವ, ಜನರಲ್ ನಾಲೆಡ್ಜ್ ಎಂದು ಏನು ಕರೆಯುತ್ತೇವೆ ಅದು ಹೆಚ್ಚಾಗಿ ಉಪಯೋಗಕ್ಕೆ ಬರುತ್ತದೆ ಕಾನೂನು ಜೊತೆಯಲ್ಲೇ ಬರುತ್ತದೆ. ನತಿಂಗ್ ಬಟ್ ಹೌಸ್ ಸೈಕಾಲಜಿ. ಮಾನ್ಯ ವಾಟಾಳ್ ನಾಗರಾಜ್ ಹೇಳಿದರು. ನಮ್ಮ ಮನಸ್ಸಿಗೆ ಬಹಳ ನೋವಾಗಿದೆ, ಸುಮಾರಾಗಿ ತಮ್ಮನ್ನು ನೋಡಿಬಿಟ್ಟರೆ ನಾವು ಹೇಗೆ ಪ್ರಶ್ನೆ ಕೇಳಬೇಕು ಎಂದು. ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರು ಅಷ್ಟೇ ಅಲ್ಲ ತಮ್ಮನ್ನು ನೋಡಿದರೂ ಈಗಾಗಲೇ ಸ್ಟಾರ್ಟ್ ಆಗಿದೆ ಸ್ವಲ್ಪ ಕಾಲ ಹಿಡಿಯಬೇಕು. ಅಧ್ಯಕ್ಷ ಪೀಠದಲ್ಲಿ ಕೃಷ್ಣರವರು ಕುಳಿತಿದ್ದಾರೆ. ನಾನು ಅತಿಯಾಗಿ ಕೇಳುವ ಹಾಗಿಲ್ಲ ಎನ್ನತಕ್ಕಂಥ ಭಾವನೆ ಬರುವುದಕ್ಕೆ ಸ್ವಲ್ಪ ಕಾಲ ಹಿಡಿಯುತ್ತದೆ. ಶ್ರೀಮತಿ ನಾಗರತ್ನಮ್ಮನವರು ಅಲ್ಲಿ ಕುಳಿತಾಗಲೂ ನಾವೆಲ್ಲಾ ಅನುಭವದಲ್ಲಿ ಪಡೆದಿದ್ದೇವೆ. ಅದು ಏನೇ ಇರಲಿ ಮತ್ತೊಂದು ಕಳಸಪ್ರಾಯ, ಇವತ್ತು ಮತ್ತೊಬ್ಬರು ಶ್ರೀಮತಿಯವರು

ಉಪಾಧ್ಯಕ್ಷ ಸ್ಥಾನವನ್ನು ಅಲಂಕಾರ ಮಾಡಿದ್ದಾರೆ. ಬಹಳ ಒಳ್ಳೆಯ ಸಂದರ್ಭದಲ್ಲಿ ನಾವಿದ್ದೇವೆ. ಈಗಾಗಲೇ ಅವರ ಸರಳತನ ಶಾಂತಸ್ವಭಾವ ಏನಿದೆ. ಅದು ಕಾನೂನು ವಿಚಾರದಲ್ಲಿ ತಮ್ಮ ಮಾರ್ಗದರ್ಶನ ಬಂದು ಬಿಟ್ಟರೆ ಬಹಳ ಒಳ್ಳೆಯದು. ಮಾನ್ಯ ಡಿ. ಬಿ. ಚಂದ್ರೇಗೌಡರು ಒಂದು ವಿಷಯವನ್ನು ಕೇಳಿದರು. ನಿಜ. ನಾನೂ ಇದರ ಬಗ್ಗೆ ನಾನು ಶ್ರೀಮತಿ ನಾಗರತ್ನಮ್ಮನವರನ್ನು ಕೇಳಿದೆ. ಉಪಾಧ್ಯಕ್ಷರನ್ನು ಅಲ್ಲಿ ಕೂಡಿಸುತ್ತಾರಲ್ಲ ಏನು ಸದಾಚಾರ ಎಂದು ನಾನು ಅವರನ್ನು ಕೇಳಿದೆ. ಅದಕ್ಕೆ ಅವರು ಏನೋಪ್ಪ ನನಗಂತೂ ಸರಿಯಾಗಿ ವಿಚಾರ ಗೊತ್ತಾಗಿಲ್ಲ. ಕೂರಿಸಿದ್ದಾರೆ ಎಂದು ಹೇಳಿದರು. ನಾನು ವಿರೋಧ ಪಕ್ಷದ ನಾಯಕನಾಗಿ ತಮ್ಮ ಜಾಗದಲ್ಲಿ ಕುಳಿತುಕೊಂಡಾಗ ಆ ಆಗ ಉಪಾಧ್ಯಕ್ಷರಾಗಿದ್ದ ಯಾವಗಲ್‌ರವರು ಕುಳಿತುಕೊಳ್ಳುತ್ತಾ ಇದ್ದರು. ಒಬ್ಬರನ್ನೊಬ್ಬರು ಪರಿಚಯ ಮಾಡಿಕೊಂಡು ನಾವು ಇಂತಹ ವಿಚಾರವನ್ನು ಸಭೆಯಲ್ಲಿ ಎತ್ತುತ್ತೇವೆ, ತಾವು ಅವಕಾಶ ಮಾಡಿಕೊಡ ಬೇಕೆಂದು ಕೇಳುವುದಕ್ಕೆ ಅನುಕೂಲವಾಗುತ್ತಿತ್ತು. ಸಾಮಾನ್ಯವಾಗಿ ಎಲ್ಲ ಪಕ್ಷದವರು ತಮಗೆ ಸಂಪೂರ್ಣವಾದ ಸಹಕಾರವನ್ನು ಕೊಡುತ್ತಾರೆ. ತಾವು ಸರ್ವಾನುಮತದಿಂದ ಆಯ್ಕೆಯಾಗಿದ್ದಕ್ಕಾಗಿ ತಮಗೆ ಶುಭವನ್ನು ಕೋರಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀಮತಿ ಮೋಟಮ್ಮ (ಮೂಡಿಗೆರೆ). — ಮಾನ್ಯ ಅಧ್ಯಕ್ಷರೆ, ಇವತ್ತು ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರನ್ನು ಉಪಾಧ್ಯಕ್ಷರನ್ನಾಗಿ ಆಯ್ಕೆ ಮಾಡಿದ್ದಕ್ಕಾಗಿ ನಮಗೆ ಹೆಮ್ಮೆಯಾಗಿದೆ. ಹಲವು ಸದಸ್ಯರುಗಳು ಅವರ ಗುಣಗಳ ಬಗ್ಗೆ ಗುಣಗಾನ ಮಾಡಿದ್ದಾರೆ. ಹಿರಿಯ ಸದಸ್ಯರುಗಳು ಅವರಿಗೆ ಸಲಹೆ ಮಾಡಿದ್ದಾರೆ. ಆದರೆ ಕಿರಿಯ ಸದಸ್ಯಳಾಗಿ ನನ್ನ ಕೋರಿಕೆ ಏನೆಂದರೆ, ನಾನು ಮೊದಲಿಗೆ ಶಾಸನ ಸಭೆಗೆ ಸದಸ್ಯಳಾಗಿ ಬಂದಾಗ, ಪ್ರತಿ ಹಂತದಲ್ಲೂ ಮಾರ್ಗದರ್ಶನ ಮಾಡುತ್ತಿದ್ದರು. ಶಾಸಕರ ಭವನದಲ್ಲಿ ನಾವುಗಳು ಅಕ್ಕಪಕ್ಕದ ಕೊಠಡಿಯಲ್ಲಿದ್ದೆವು. ಈ ಸದನದಲ್ಲಿ ಮಾನ್ಯ ಉಪಾಧ್ಯಕ್ಷರು ಕಿರಿಯ ಸದಸ್ಯರು ಗಳಿಗೆ ಸದನದಲ್ಲಿ ನಾವು ಹೇಗೆ ನಡೆದುಕೊಳ್ಳಬೇಕು, ನಮ್ಮ ಕಾರ್ಯಕಲಾಪಗಳಲ್ಲಿ ಯಾವ ರೀತಿ ನಾವು ಭಾಗವಹಿಸಬೇಕೆನ್ನುವ ಬಗ್ಗೆ ಮಾರ್ಗದರ್ಶಕರಾಗಿ ಮಾರ್ಗದರ್ಶನ ನೀಡಲಿ ಎಂದು ಹೇಳುತ್ತಾ, ದೇವರು ಅವರಿಗೆ ಎಲ್ಲಾ ರೀತಿಯಲ್ಲೂ ಧೈರ್ಯ, ಸ್ಥೈರ್ಯ ಮತ್ತು ಶಕ್ತಿಯನ್ನು ಕೊಡಲಿ ಎಂದು ಹೇಳಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಜಿ. ರಾಜೂಗೌಡ (ಹನೂರು). — ಸನ್ಮಾನ್ಯ ಸಭಾಧ್ಯಕ್ಷರೆ, ಈ ದಿವಸ ಈ ಮನೆಯ ಉಪಾಧ್ಯಕ್ಷರನ್ನಾಗಿ ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರನ್ನು ಸರ್ವಾನುಮತದಿಂದ ಆಯ್ಕೆ ಮಾಡಿದ್ದಕ್ಕಾಗಿ ನಮಗೆ ತುಂಬಾ ಸಂತೋಷವಾಗಿದೆ. ಈ ಒಂದು ಸ್ಥಾನಕ್ಕೆ ಹೆಣ್ಣು ಮಗಳನ್ನು ಸೂಚಿಸಿದ್ದಕ್ಕಾಗಿ ಮೊಟ್ಟ ಮೊದಲು ನಮ್ಮ ನಾಯಕರಿಗೆ ನನ್ನ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಹಿಂದೆ ಈ ಮನೆಗೆ ಅಧ್ಯಕ್ಷರನ್ನಾಗಿ ಶ್ರೀಮತಿ ಕೆ. ಎಸ್. ನಾಗರತ್ನಮ್ಮನವರನ್ನು ಆಯ್ಕೆ ಮಾಡಿ, ಮೇಲ್ಪಂಕ್ತಿ ಹಾಕಿಕೊಟ್ಟಿದ್ದೆವು. ಮತ್ತೆ ಈ ದಿವಸ ಹೆಣ್ಣು ಮಗಳನ್ನು ಉಪಾಧ್ಯಕ್ಷ ಸ್ಥಾನಕ್ಕೆ ಆಯ್ಕೆ ಮಾಡಿ, ಒಳ್ಳೆಯ ಸಂಪ್ರದಾಯವನ್ನು ಹಾಕಿದ್ದೇವೆ. ನಾವು ಇವತ್ತು ನೀವು ವಿಧಾನ ಸಭೆಯಲ್ಲಿದ್ದೇವೆ. ನೀವು ವಿಧಾನ ಸಭೆಯಲ್ಲಿ ಅಧ್ಯಕ್ಷ ಸ್ಥಾನ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ಹೆಣ್ಣು ಮಕ್ಕಳನ್ನೇ ಆಯ್ಕೆ ಮಾಡ ಬೇಕೆಂದು ನಾನು ಆಶೆ ಪಡುತ್ತೇನೆ. ಏಕೆಂದರೆ ಪ್ರತಿಯೊಂದು ನಿಯಂತ್ರಣವನ್ನು ಗಂಡಸರಿಗಿಂತ ಹೆಂಗಸರೇ ಚೆನ್ನಾಗಿ ನಿರ್ವಹಣೆ ಮಾಡುತ್ತಾರೆ. ನಾವು ನೋಡಿದಂತೆ ಶ್ರೀಮತಿ ಕೆ. ಎಸ್. ನಾಗರತ್ನಮ್ಮನವರು ಆರು ವರ್ಷಗಳ ಕಾಲ ಈ ಮನೆಯ ಅಧ್ಯಕ್ಷರಾಗಿ ಸಭೆಯನ್ನು ಚೆನ್ನಾಗಿ ನಡೆಸಿಕೊಂಡು ಹೋಗಿದ್ದಾರೆ ಸಾಮಾನ್ಯವಾಗಿ ಆ ಸ್ಥಾನದಲ್ಲಿ ಹೆಂಗಸರು ಕೂತಿದ್ದರೆ ಯಾರೂ ಗಲಾಟೆ ಮಾಡುವುದಕ್ಕೆ ಹೋಗುವುದಿಲ್ಲ. ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರು ಕೂಡ ಈ ಸಭೆಯನ್ನು ನಿಯಂತ್ರಣ ಮಾಡತಕ್ಕ ಶಕ್ತಿ ಹೊಂದಿದ್ದಾರೆ. ಅವರು ಸರಳ ಜೀವಿಗಳು, ಮಿತ ಭಾಷಿಗಳು ಆದರ್ಶ ಪ್ರಾಯರಾಗಿದ್ದಾರೆ. ಅವರು ಹಿಂದೆ ರಾಜ್ಯ ಸಚಿವರಾಗಿ ಒಳ್ಳೆಯ ಸೇವೆ ಸಲ್ಲಿಸಿದ್ದಾರೆ ಈ ಮನೆಯ ಒಂದು ಸತ್‌ಸಂಪ್ರದಾಯವನ್ನು ಎತ್ತಿ ಹಿಡಿಯುವುದರಲ್ಲಿ ಅವರು ನಿಸ್ಸೀಮರಾಗಿದ್ದಾರೆ ಆದ್ದರಿಂದ ಅವರಿಗೆ ದಯಾಮಯನಾದ ಮಹದೇಶ್ವರನು ಒಳ್ಳೆಯ ಶಕ್ತಿ ಯನ್ನು ಆರೋಗ್ಯವನ್ನು ದಯ ಪಾಲಿಸಲಿ ಎಂದು ಹಾರೈಸಿ, ಹೆಣ್ಣುಮಗಳನ್ನು ಈ ಸ್ಥಾನಕ್ಕೆ ಸೂಚಿಸಿದ್ದಕ್ಕಾಗಿ ಮತ್ತೊಮ್ಮೆ ನಮ್ಮ ನಾಯಕರಿಗೆ ಅಭಿನಂದಿಸುತ್ತಾ, ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಶಿವಮೂರ್ತಿ (ಭರಮಸಾಗರ).—ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ಈ ಉಪಾಧ್ಯಕ್ಷರ ಸ್ಥಾನಕ್ಕೆ ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರನ್ನು ಈ ಸದನದಲ್ಲಿ ಆಯ್ಕೆ ಮಾಡಿರುವುದಕ್ಕೆ ನಾನು ಬಹಳ ಸಂತೋಷ ಪಡುತ್ತೇನೆ ನಮ್ಮ ಕ್ಷೇತ್ರ ಅವರ ಕ್ಷೇತ್ರ ಒಂದೇ ತಾಲ್ಲೂಕಿಗೆ ಸೇರಿರತಕ್ಕದ್ದು. ಆದ್ದರಿಂದ ಅವರು ಬೇರೆಯವರಿಗಿಂತ ನನಗೆ ಬಹಳ ಹತ್ತಿರದವ

ರಾಗಿದ್ದಾರೆ. ಅವರು ನಾಲ್ಕನೆಯ ಬಾರಿ ಈ ವಿಧಾನ ಸಭೆಗೆ ಆಯ್ಕೆಯಾಗಿ ಬಂದಿದ್ದಾರೆ. ಮಂತ್ರಿಯಾಗಿಯೂ ಸಹ ಅವರು ಕೆಲಸ ಮಾಡಿದ್ದಾರೆ. ಅವರಿಗೆ ಹೆಣ್ಣು ಮಕ್ಕಳ ಕಾರ್ಯ ಚಟುವಟಿಕೆಗಳ ಬಗ್ಗೆ ಹೆಚ್ಚಿನ ಆಸಕ್ತಿ ಇದೆ. ಅವರ ಕ್ಷೇತ್ರದಲ್ಲಿ ಹೆಚ್ಚಿನ ಆಸಕ್ತಿಯಿಂದ ಕೆಲಸ ಮಾಡಿದ್ದಾರೆ. ಸಮಾಜ ಸೇವೆಯನ್ನೂ ಸಹ ಮಾಡಿದ್ದಾರೆ. ಮಹಿಳಾ ಮತ್ತು ಮಕ್ಕಳ ಕಲ್ಯಾಣಕ್ಕೋಸ್ಕರ ನಮ್ಮ ಜಿಲ್ಲೆಯಿಂತಲೂ ಬಹಳ ಆಸಕ್ತಿಯಿಂದ ಕೆಲಸ ಮಾಡಿದ್ದಾರೆ. ಅವರ ಮಾತು ಅವರು ಸ್ಥಾಪಿಸಿರುವಂತಹ ಸಂಸ್ಥೆಗಳು ಇವತ್ತು ಎದ್ದು ಕಾಣುತ್ತಿವೆ. ಅವರು ವಿದ್ಯಾ ಮಂತ್ರಿಯಾಗಿದ್ದಾಗ ದುರ್ಬಲ ವರ್ಗಕ್ಕೆ ಸೇರಿದ ಸಂಸ್ಥೆಗಳಿಗೆ ಅವರು ಕರೆದು ಕರೆದು ಅನುದಾನವನ್ನು ಕೊಟ್ಟು. ಅವುಗಳನ್ನು ಹೇಗೆ ನಡೆಸಬೇಕೆಂಬ ಬಗ್ಗೆ ಹೇಳುತ್ತಿದ್ದರು. ಚಿಕ್ಕಪುಟ್ಟ ಸಂಸ್ಥೆ ಇರಬಹುದು. ಅಥವಾ ಸಮಾಜ ಕಲ್ಯಾಣ ಇಲಾಖೆಯಿಂದ ನಡೆಸುವ ಹೆಣ್ಣು ಮಕ್ಕಳ ಕೇಂದ್ರವಿರಬಹುದು. ಅವುಗಳನ್ನು ಯಾವ ರೀತಿ ನಡೆಸುತ್ತಾರೆಂಬುವುದರ ಬಗ್ಗೆ ಬಹಳ ಆಸಕ್ತಿಯಿಂದ ನೋಡುತ್ತಿದ್ದರು. ಇವತ್ತು ಈ ಸಭೆಗೆ ಅವರನ್ನು ಉಪಾಧ್ಯಕ್ಷ ಸ್ಥಾನಕ್ಕೆ ಆಯ್ಕೆ ಮಾಡಿರತಕ್ಕದ್ದು ನಮಗೆಲ್ಲರಿಗೂ ಹೆಮ್ಮೆಯ ವಿಚಾರ. ಅವರು ವಿದ್ಯೆ, ಬುದ್ಧಿ, ತಾಳ್ಮೆಯಲ್ಲಿ ಯಾರಿಗಿಂತಲೂ ಕಡಿಮೆ ಇಲ್ಲ. ಎಲ್ಲರನ್ನೂ ವಿಶ್ವಾಸಕ್ಕೆ ತಕ್ಕ ಶಕ್ತಿ ಅವರಲ್ಲಿ ಇದೆ. ಅವರ ಒಂದು ಶಕ್ತಿಯನ್ನು ಗುರುತಿಸಿ ಪಕ್ಷ ಮತ್ತು ಸದನ ಅವರಿಗೆ ಈ ಸ್ಥಾನವನ್ನು ಕೊಟ್ಟಿರತಕ್ಕದ್ದು ಬಹಳ ಹೆಮ್ಮೆಯ ವಿಚಾರ: ಅವರು ಈ ಸ್ಥಾನವನ್ನು ಬಹಳ ಎತ್ತರಕ್ಕೆ ತೆಗೆದುಕೊಂಡು ಹೋಗುತ್ತಾರೆಂಬ ಭಾವನೆಯನ್ನು ನಾನು ಇಟ್ಟುಕೊಂಡಿದ್ದೇನೆ. ನಾನು ಅವರಲ್ಲಿ ಕೇಳಿಕೊಳ್ಳುವುದು ಇಷ್ಟೆ. ಕೆಲವು ಸಲ ಈ ಸದನದಲ್ಲಿ ಅನೇಕ ಘಟನೆಗಳು ನಡೆದುಹೋಗುತ್ತವೆ ಕೆಲವು ಉದ್ವೇಶದಿಂದಲೂ ಅಥವಾ ಕೆಲವು ಗೊತ್ತಾಗದ ರೀತಿಯಿಂದ ಕೆಲವು ಸಮಸ್ಯೆಗಳು ಆಗುತ್ತವೆ. ಸಾಮಾನ್ಯವಾಗಿ ಹಿಂದೆ ಕುಳಿತಿರತಕ್ಕ ಹೊಸ ಶಾಸಕರು ಏನೋ ಹೇಳಬೇಕಾದ ಸಂದರ್ಭ ಬರುತ್ತದೆ. ಅದನ್ನು ಯಾವ ರೀತಿ, ಯಾವ ಧಾಟಿಯಲ್ಲಿ ಹೇಳಬೇಕು, ಯಾವ ಅನುಭವದಿಂದ ಹೇಳಬೇಕೆಂಬ ಬಗ್ಗೆ ಅನುಭವದ ಕೊರತೆ ಇರುತ್ತದೆ. ಇದರ ಬಗ್ಗೆ ಅಧ್ಯಕ್ಷ ಉಪಾಧ್ಯಕ್ಷ, ಸ್ಥಾನದಲ್ಲಿ ಕುಳಿತಿರತಕ್ಕ ತಾವುಗಳು ನಮಗೆ ತಿಳುವಳಿಕೆ ಕೊಡಬೇಕು. ಕೆಲವು ಸಲ ನಾವು ಹೇಳತಕ್ಕ ಧಾಟಿ ಉದ್ವೇಗದಿಂದ ಕೂಡಿರಬಹುದು. ಅದು ತಪ್ಪಾಗಿರಬಹುದು, ಕೆಲವು ಸಾರಿ ನಾವು ಉದ್ವೇಗದಿಂದ ಮಾತನಾಡಿದಾಗ ತಾವೇ ಕಡತದಿಂದ ವಾಪಸ್ಸು ತೆಗೆಸಿದ್ದೀರಿ ಇಂತಹ ಸಂದರ್ಭವನ್ನು ನೋಡಿದ್ದೇವೆ. ಹಾಗೂ ಅನುಭವಿಸಿದ್ದೇವೆ. ಆದ್ದರಿಂದ ಕಿರಿಯ ಶಾಸಕರಿಗೆ ತಾವು ಮಾರ್ಗದರ್ಶನ ನೀಡಬೇಕು ಅದೇ ಹಿರಿಯ ಶಾಸಕರಾದರೆ ಅವರು ಬಹಳಷ್ಟು ರೀತಿಯಲ್ಲಿ ಅರ್ಥಗರ್ಭಿತವಾಗಿ ಒಂದು ವಾಕ್ಯ ಇದ್ದರೆ, ಅದನ್ನು ೧೦ ವಾಕ್ಯ ಮಾಡಿ ಹೇಳತಕ್ಕ ಶಕ್ತಿ ಅವರಲ್ಲಿ ಇದೆ. ನಮಗೆ ಸಾವಿರಾರು ವಾಕ್ಯಗಳು ಗೊತ್ತಿದ್ದರೂ ಸಹ ಅದನ್ನು ಒಂದು ಪದ ಮಾಡಲಿಕ್ಕೆ ಬಹಳ ಕಷ್ಟವಾಗುತ್ತದೆ ಆದ್ದರಿಂದ ಹೊಸದಾಗಿ ಬಂದಿರತಕ್ಕ ಶಾಸಕರಿಗಾಗಲಿ, ಅಥವಾ ಯಾವ ಶಾಸಕರಿಗಾಗಲಿ ಅವರಿಗೆ ಹೆಚ್ಚಿನ ತಿಳುವಳಿಕೆ ಮತ್ತು ಮಾರ್ಗದರ್ಶನವನ್ನು ತಾವು ನೀಡಬೇಕು. ಆ ಸ್ಥಾನವನ್ನು ಎತ್ತರಕ್ಕೆ ಕೊಂಡೊಯ್ಯುವಂತೆ ಮಾಡಬೇಕು. ಕಾಂಗ್ರೆಸ್ ಪಕ್ಷದ ಇತಿಹಾಸದಲ್ಲಿ ಸತತವಾಗಿ ಹೆಣ್ಣು ಮಕ್ಕಳಿಗೆ ರಿಜರ್ವೇಷನ್ ಮತ್ತು ಹೆಚ್ಚಿನ ಸ್ಥಾನಮಾನಗಳನ್ನು ಕಲ್ಪಿಸಿಕೊಡಲಾಗಿದೆ. ಹೆಣ್ಣು ಮಕ್ಕಳಿಗೆ ಹೆಚ್ಚಿನ ರೀತಿಯಲ್ಲಿ ಸರಿಸಮಾನತೆಯಂ ಸ್ಥಾನವನ್ನು ಕಲ್ಪಿಸಿಕೊಡುವುದರಲ್ಲಿ ಕಾಂಗ್ರೆಸ್ ಪಕ್ಷ ಹಿಂಜರಿದಿಲ್ಲವೆಂಬುದಕ್ಕೆ ಈ ಕೆಲಸವನ್ನು ನಾವು ಮಾಡಿದ್ದೇವೆ. ಇದು ಬಹಳ ಶ್ಲಾಘನೀಯವಾದುದು. ಆವರಿಗೆ ದೇವರು ಶುಭಾ ಹಾರೈಸಲೆಂದು ಹೇಳಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಹೆಚ್. ಹನುಮಂತಯ್ಯ (ಚಿತ್ರದುರ್ಗ). — ಮಾನ್ಯ ಅಧ್ಯಕ್ಷರೇ, ಶ್ರೀಮತಿ ನಾಗಮ್ಮ ಕೇಶವ ಮೂರ್ತಿಯವರು ನಮ್ಮ ಜಿಲ್ಲೆಯವರು. ಅವರು ಇವತ್ತಿನ ದಿವಸ ಈ ಸಭೆಯ ಉಪಾಧ್ಯಕ್ಷರಾಗಿ ಆಯ್ಕೆಯಾಗಿರುವುದು ನನಗೆ ತುಂಬಾ ಸಂತೋಷ ಉಂಟು ಮಾಡಿದೆ. ಅದೇನೊ ಆ ಕುರ್ಚಿಗೂ ನಮ್ಮ ಜಿಲ್ಲೆಗೂ ಬಹಳ ನಂಟಸ್ತಿಕೆ ಇದ್ದ ಹಾಗೆ ಕಾಣುತ್ತದೆ. ನಮ್ಮ ಜಿಲ್ಲೆಯವರು ಮಂತ್ರಿಗಳಾಗುವದಕ್ಕಿಂತಲೂ ಹೆಚ್ಚು ಜನ ಅಧ್ಯಕ್ಷರಾಗಿ, ಉಪಾಧ್ಯಕ್ಷರಾಗಿ ಇಲ್ಲಿ ಕಾರ್ಯ ನಿರ್ವಹಿಸಿದ್ದಾರೆ ಈಗ ಅವರು ಮೂರನೆಯವರೆಂದು ನಾನು ಭಾವಿಸಿದ್ದೇನೆ. ಮಾನ್ಯ ರಂಗನಾಥರೆಡ್ಡಿಯವರು ಅಧ್ಯಕ್ಷರಾಗಿದ್ದರು. ಮಾನ್ಯ ಮಂಜುನಾಥರೆಡ್ಡಿಯವರು ಉಪಾಧ್ಯಕ್ಷರಾಗಿದ್ದರು. ಈಗ ಪುನಃ ನಾಗಮ್ಮ ಕೇಶವಮೂರ್ತಿಯವರು ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಇವತ್ತು ಅವರನ್ನು ನಮ್ಮ ಜಿಲ್ಲೆಯ ಪರವಾಗಿ ಮಾತ್ರ ಅಲ್ಲ, ನಮ್ಮ ಪಕ್ಷದ ಪರವಾಗಿಯೂ ಸಹ ಮಾನ್ಯ ಚಂದ್ರೇಗೌಡರು ಹೇಳಿದಂತೆ ಪೂರ್ಣ ಸಹಕಾರ ನೀಡುತ್ತೇವೆಂದು ಭರವಸೆ ಕೊಡುತ್ತೇನೆ. ಅನೇಕ ಸಂದರ್ಭದಲ್ಲಿ ನಾವು ಅನೇಕ ವಿಚಾರಗಳನ್ನು ಹಾಗೂ ನಮ್ಮ ಅಭಿಪ್ರಾಯಗಳನ್ನು ನೀಡುವಾಗ ಯಾವುದೇ ಪೂರ್ವಗ್ರಹ ಪೀಡಿತರಾಗದೆ ಅಥವಾ ಯಾವುದೇ ರಾಗ ದ್ವೇಷಗಳಿಗೆ ಬಲಿಯಾಗದೆ ನಾವು ಕಾರ್ಯನಿರ್ವಹಿಸಬೇಕಾಗಿರುತ್ತದೆ. ಅಂತಹ ಕಾರ್ಯವನ್ನು ಅವರು ನಿರ್ವಹಿಸುತ್ತಾರೆಂಬ ನಂಬಿಕೆ ನನಗೆ ಇದೆ. ಈ ಸಭೆಯ ಉನ್ನತ ಪರಂಪರೆ ಏನಿದೆ ಆ ಉನ್ನತ

ಪರಂಪರೆಯನ್ನು ಅವರು ಕಾಪಾಡಿಕೊಂಡು ಹೋಗಬೇಕು. ಮತ್ತು ಈ ಸಭೆಯಂ ಘನತೆ ಮತ್ತು ಗಾಂಭೀರ್ಯದಿಂದ ಕಾರ್ಯಕಲಾಪವನ್ನು ನಡೆಸುವ ರೀತಿಯಲ್ಲಿ ಅವರು ಕೆಲಸ ಮಾಡ.ತ್ತಾರೆಂಬ ವಾತನ್ನು ಹೇಳುತ್ತಾ, ಅದಕ್ಕೆ ಬೇಕಾದಂತಹ ಎಲ್ಲ ವಿಧವಾದ ಸಹಾಯವನ್ನು ಮತ್ತು ಸಹಕಾರ ವನ್ನು ನಾವು ಕೊಡುತ್ತೇವೆಂಬ ಮಾತನ್ನು ಹೇಳುತ್ತಾ. ಅವರನ್ನು ಮತ್ತೊಮ್ಮೆ ಅಭಿನಂದಿಸಿ, ನನ್ನ ಮಾತನ್ನು ಮುಂಗಿಸುತ್ತೇನೆ.

† ಅಧ್ಯಕ್ಷರು.—ಶ್ರೀಮತಿ ನಾಗಮ್ಮ ಕೇಶವಮೂರ್ತಿ ಅವರನ್ನು ಇವೊತ್ತು ಸರ್ವ ಸಮ್ಮತಿಯಿಂದ ಈ ಸದನದ ಉಪಾಧ್ಯಕ್ಷತೆಗೆ ಆಯ್ಕೆ ಮಾಡಿರತಕ್ಕಂಥ ಈ ಸಂದರ್ಭದಲ್ಲಿ ಈ ಸದನದ ಎಲ್ಲ ಸದಸ್ಯರನ್ನೂ ಕೂಡ ನಾನು ಅಭಿನಂದಿಸುತ್ತೇನೆ. ಪ್ರಥಮವಾಗಿ ವಿರೋಧಪಕ್ಷದ ನಾಯಕರಾದಂಥ ಮಾನ್ಯ ಶ್ರೀ ಡಿ. ಬಿ. ಚಂದ್ರೇಗೌಡರನ್ನು ನಾನು ಅಭಿನಂಧಿಸುವುದು ಸರಿಯಾಗಿದೆ ಎಂದು ಭಾವನೆ ಮಾಡುತ್ತೇನೆ. ಅವರು ಯಾವ ಪ್ರಸ್ತಾವದ ಸೂಚನೆಯನ್ನು ಕೊಟ್ಟಿದ್ದರೋ ಆ ಪ್ರಸ್ತಾವವನ್ನು ಈ ಸಭೆಯಲ್ಲಿ ಇಡದೆ ಈ ಸರ್ವಾನುಮತದ ಆಯ್ಕೆಗೆ ಅವರು ತಮ್ಮ ಪೂರ್ಣ ಸಹಕಾರವನ್ನು ಕೊಟ್ಟರುವ ದೃಷ್ಟಿಯಿಂದ ವಿಶೇಷವಾಗಿ ನಾನು ವಿರೋಧ ಪಕ್ಷದವರನ್ನು ಮನಸಾರೆ ಅಭಿನಂದಿಸುತ್ತೇನೆ. ಶ್ರೀಮತಿ ನಾಗಮ್ಮ ಕೇಶವಮೂರ್ತಿ ಅವರನ್ನು ನಾನು ೧೯೬೪-೬೫ನೇ ಇಸವಿಯಿಂದ ಬಲ್ಲೆ. ಅವರ ಯಜಮಾನರಾದಂಥ ಶ್ರೀ ಕೇಶವಮೂರ್ತಿ ಅವರು ನನ್ನ ಆತ್ಮೀಯ ಸ್ನೇಹಿತರಲ್ಲಿ ಒಬ್ಬರು. ನಾನು ಮತ್ತು ಕೇಶವಮೂರ್ತಿ ಅವರು ಪ್ರಜಾಸೋಷಲಿಸ್ಟ್ ಪಕ್ಷದಲ್ಲಿ ಕಾರ್ಯನಿರತ ವ್ಯಕ್ತಿಗಳಾಗಿದ್ದೆವು, ಸ್ನೇಹಿತರಾಗಿದ್ದೆವು ಆ ಪಕ್ಷವನ್ನು ಬೆಳೆಸಲಿಕ್ಕೆ ಬಹಳಮಟ್ಟಿಗೆ ಕಷ್ಟಪಟ್ಟಿದ್ದವು. ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರು ಅದೇ ಸಂಪ್ರದಾಯದಲ್ಲಿ, ಅದೇ ಭೂಮಿಕೆಯಲ್ಲಿ ಬೆಳೆದುಬಂದಿರತಕ್ಕ ಒಬ್ಬ ನಾಯಕರು ಹಾಗೆ ಎಂದು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರನ್ನು ನಾನು ವಿಧಾನ ಸಭೆಯಲ್ಲಿ ಕಂಡಿದ್ದೇನೆ. ಅನಂತರ ಶಿಕ್ಷಣ ಸಚಿವರಾಗಿ ಅವರು ಎಷ್ಟು ಉತ್ತಮ ರೀತಿಯಲ್ಲಿ ಕಾರ್ಯ ನಿರ್ವಹಣೆ ಮಾಡಿದ್ದಾರೆ ಎನ್ನುವ ಬಗ್ಗೆಯೂ ಕೂಡ ನನಗೆ ಚೆನ್ನಾಗಿ ಜ್ಞಾಪಕ ಉಂಟು. ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರು ಈ ಸ್ಥಾನಕ್ಕೆ ಹೊಂದಿ ಬೇಕಾದಂಥ ವಿದ್ಯಾ ಅರ್ಹತೆಗಳನ್ನು ಕೂಡ ಹೆಚ್ಚಿನ ಪ್ರಮಾಣದಲ್ಲಿ ಅನುಭವದಿಂದ ಪಡೆದುಕೊಂಡಿದ್ದಾರೆ. ಶಿಕ್ಷಣದಿಂದ ಪಡೆದುಕೊಂಡಿದ್ದಾರೆ. ಆದ್ದರಿಂದ, ಅವರನ್ನು ಮನಸಾರೆ ಅಭಿನಂದಿಸಿ ನಾನು ಸ್ವಾಗತಿಸುತ್ತೇನೆ. ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರು ಕನ್ನಡ ಸಾಹಿತ್ಯ ಪರಿಷತ್ತಿನ ಮಹಿಳಾ ವಿಭಾಗದಲ್ಲಿ ಬಹಳ ಹೆಚ್ಚಿನ ಆಸ್ಥೆಯನ್ನು ವಹಿಸಿದ್ದಾರೆ. ನಗರಸಭೆಯ ಸದಸ್ಯರಾಗಿ ದಾವಣಗೆರೆಯಲ್ಲಿ ಸೇವೆ ಸಲ್ಲಿಸಿದ್ದಾರೆ ಹಾಗೂ ಅನುಭವವನ್ನು ಪಡೆದಿದ್ದಾರೆ ಶ್ರೀಮತ್ತು ಇನ್ನೇ ವಿಧಾನ ಸಭೆಯಲ್ಲಿ ಸದಸ್ಯರಾಗಿ ಬಹಳ ಹೆಚ್ಚಿನ ಸಂಸದೀಯ ಅನುಭವವನ್ನು ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರು ಪಡೆದಿದ್ದಾರೆ. ಅವರಲ್ಲಿ ವಿಶೇಷವಾದ ಆಸಕ್ತಿ ಏನು ಅಂದರೆ, ಮೆಂಟಲಿ ರಿಟಾರ್ಡೆಡ್‌ಗೆ ಚಿಲ್ಡ್ರನ್. ಅದರ ಬಗ್ಗೆ ಹೆಚ್ಚು ಆಸ್ಥೆ ಹೆಚ್ಚು ಕಾಳಜಿ ಅವರಲ್ಲಿ ಇದೆ. ಅವರು ಮತ್ತೊಂದು ಪ್ರಮುಖವಾಗಿ ಶಿಕ್ಷಣ ಪಡೆದಿರತಕ್ಕದ್ದು ಡಿಪ್ಲೊಮೊ ಇನ್ ಚೈಲ್ಡ್ ಎಜುಕೇಷನ್. ಅದು ಕೂಡ ಈ ಸದನವನ್ನು ನಡೆಸತಕ್ಕ ಕಾಲದಲ್ಲಿ ಬಹಳ ಅನುಕೂಲವಾಗುತ್ತದೆ ಈ ಚೈಲ್ಡ್ ಎಜುಕೇಷನ್ ಡಿಪ್ಲೊಮೊ ಏನಿದೆ ಅದು ಬಹಳ ಮಟ್ಟಿಗೆ ಸಹಾಯವಾಗುತ್ತದೆಂದು ನನಗೆ ಅನುಭವ. ಏಕೆಂದರೆ, ನಾವು ತಾಳ್ಮೆ ಕಳೆದುಕೊಂಡಾಗ, ಕೋಪ ಉದ್ವೇಗಗಳಿಗೆ ನಾವು ವಶರಾದಾಗ ನಾವೆಲ್ಲಾ ಮಕ್ಕಳು ತರಹ ಆಗುತ್ತೇವೆ. ಎಲ್ಲರೂ ಸದಸ್ಯರೇ ಆಗಿರಬಹುದು. ಆದರೆ ತಾಳ್ಮೆಯನ್ನು ಕಳೆದುಕೊಂಡಾಗ ಉದ್ವೇಗದ ಶಿಶುಗಳಾದಾಗ ನಾವು ಮತ್ತೂ ಶಿಶುಗಳಾಗಿ ಹೋಗುತ್ತೇವೆ. ಆದ್ದರಿಂದ, ನಮ್ಮ ಉಪಾಧ್ಯಕ್ಷರಿಗೆ ಈ ಚೈಲ್ಡ್ ಎಜುಕೇಷನ್‌ನಲ್ಲಿ ಡಿಪ್ಲೊಮೋ ಇರತಕ್ಕದ್ದರಿಂದ ಮಕ್ಕಳಿಗೆ ಕೋಪ ಬಂದಾಗ ಹೇಗೆ ನಾವು ಒಲಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ ಅಂತಹ ಮನೋಭಾವನೆಯನ್ನು ಈ ಸದನ ನಡೆಸತಕ್ಕಂಥ ಕಾರ್ಯಕಲಾಪಗಳಿಗೆ ತರುತ್ತಾರೆಂದು ನಾನು ಆಶಿಸುತ್ತೇನೆ. ಮತ್ತೂ ಒಂದು ವಿಚಾರ ಏನೆಂದರೆ, ಮಾನ್ಯ ವಿರೋಧಿ ಪಕ್ಷದ ನಾಯಕರು ಹೇಳಿದರು ತಾಯಿ

೨-೩೦ ಪಿ. ಎಂ.

ತನದ ಭಾವನೆ ಬರುತ್ತದೆ ಎಂದು, ಅದು ಸರಿಯಾದಂತಹ ಮಾತು. ನನಗೆ ಒಂದು ಸಮಾಧಾನ ಏನೆಂದರೆ, ವಿರೋಧ ಪಕ್ಷದಲ್ಲಿ ಮುಂದಿನ ಸಾಲಿನಲ್ಲಿ ಕುಳಿತಿರುವ ಮಾನ್ಯ ಸದಸ್ಯರುಗಳು ಮತ್ತು ಹಿಂದಿನ ಸಾಲಿನಲ್ಲಿ ಕೂತಿರತಕ್ಕಂತಹ ಮಾನ್ಯ ಸದಸ್ಯರುಗಳು, ಅವರಿಗೂ ಮತ್ತು ಅಧ್ಯಕ್ಷರಿಗೂ ಒಂದು ರೀತಿಯ ಶಾಕ್ ಅಬ್ಸಾರ್ಬ್ ಶ್ರೀಮತಿ ನಾಗಮ್ಮ ಕೇಶವಮೂರ್ತಿ ಅವರು ಏಕೆಂದರೆ ಹಿಂದಿನ ಅಧಿವೇಶನದಲ್ಲಿ ನಾವು ನೋಡಿದ್ದೇವೆ. ಅಧ್ಯಕ್ಷರ ಪೀಠವನ್ನು ಸುತ್ತುವರೆದಿರುವ ಕಹಿ ಪ್ರಸಂಗ

ಗಳು ಹಿಂದೆ ನಡೆದಿರತಕ್ಕಂಥಾದ್ದು ಇದೆ. ಅದು ಮತ್ತೆ ಮರುಕಳಿಸದೇ ಇರಲೀ ಎಂದು ನನ್ನ ಆಸೆ. ಆ ಆಸೆಯನ್ನು ನೀವು ಕೈಗೂಡಿಸುತ್ತೀರಿ ಎಂಬ ಸಂಪೂರ್ಣ ಭರವಸೆ ನನಗಿದೆ. ಶ್ರೀಮತಿ ನಾಗವ್ಮ ಕೇಶವ ಮೂರ್ತಿಯವರು ಸೌಮ್ಯ ಸ್ವಭಾವದವರು, ಮೃದು ಸ್ವಭಾವದವರೆಂದು ಕೆಲವರು ಮಾತನಾಡುವಾಗ ಹೇಳಿದರು. ಈ ಅಧ್ಯಕ್ಷ ಸ್ಥಾನಕ್ಕೆ ಬಂದು ಕೂತಮೇಲೆ ನೀವು ಎಷ್ಟೇ ಸೌಮ್ಯ ಮೃದು ಸ್ವಭಾವದವರೇ ಇರಲಿ ಆವಗ ಕೈಗೆ ಈ ಅಧ್ಯಕ್ಷಸ್ಥಾನದ ಗಂಟೆ ಸಿಕ್ಕಿದಾಗ ಆ ಮೃದು ಮತ್ತು ಸೌಮ್ಯ ಸ್ವಭಾವ ಸಂಪೂರ್ಣವಾಗಿ ಪರಿವರ್ತನೆಯಾಗಿ ರೂಲ್ಸ್ ಪುಸ್ತಕ ನಮ್ಮ ಮುಂದೆ ಎದ್ದು ಕಾಣುತ್ತದೆ. ಆದ್ದರಿಂದ ಆದರ ಚೌಕಟ್ಟಿನಲ್ಲಿ ಈ ಸಭೆಯನ್ನು ನಡೆಸಿಕೊಂಡು ಹೋಗಬೇಕಾಗುತ್ತದೆ. ನಾವು ಇಲ್ಲಿ ಒಂದು ರೀತಿ ಬಂಧಿಗಳಾಗಿ ಈ ಕುರ್ಚಿಯಲ್ಲಿ ಕೂರಬೇಕಾಗುತ್ತದೆ. ಹಿಂದೆ ಈ ಸಭೆಯ ಅಧ್ಯಕ್ಷರಾಗಿದ್ದಂತಹ ಶ್ರೀಮತಿ ನಾಗರತ್ನಮ್ಮನವರು ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರಿಗೆ ಕಿವಿ ಮಾತುಗಳನ್ನು ಹೇಳುತ್ತಾ ಮೇಲೆ ತಕ್ಕಡಿ ಇದೆ, ಸಮಾನವಾದಂತಹ ದೃಷ್ಟಿಯಿಂದ ನ್ಯಾಯವಾದ ದೃಷ್ಟಿಯಿಂದ ಈ ಸದನದ ಕಾರ್ಯಕಲಾಪಗಳನ್ನು ನಡೆಸಿಕೊಂಡು ಹೋಗಿ ಎಂದು ಹೇಳಿದರು. ನನಗೆ ಮತ್ತು ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರಿಗೆ ಶ್ರೀಮತಿ ನಾಗರತ್ನಮ್ಮನವರು ಏನು ಕಿವಿ ಮಾತುಗಳನ್ನು ಹೇಳಿದ್ದಾರೆ ಆ ಕಿವಿ ಮಾತುಗಳನ್ನು ತತ್ವಶಃ ಅಕ್ಷರಶಃ ಅನುಸರಿಸಿಕೊಂಡು ಹೋಗುವುದಕ್ಕೆ ಪ್ರಯತ್ನ ಮಾಡುತ್ತೇವೆ ಅನ್ನತಕ್ಕಂತಹ ಮತ್ತೂ ಒಂದು ಭರವಸೆಯ ಮಾತನ್ನು ಆಡಿ ಈ ಸದನದ ತಮ್ಮೆಲ್ಲರ ಪರವಾಗಿ ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರು ಉಪಾಧ್ಯಕ್ಷರಾಗಿ ಆಯ್ಕೆಯಾದದ್ದನ್ನು ಮನಸಾರೆ ಅಭಿನಂದಿಸಿ ಇನ್ನೂ ಹೆಚ್ಚಿನ ಜನಸೇವೆ ಮಾಡತಕ್ಕಂತಹ ಅವಕಾಶ ಅವರಿಗೆ ಸಿಕ್ಕಲಿ, ಮತ್ತು ಈ ಸ್ಥಾನದಲ್ಲಿ ಹೆಚ್ಚಿನ ಯಶಸ್ಸನ್ನು ಅವರು ಗಳಿಸಲೀ ಎಂದು ಹಾರೈಸಿ ನನ್ನ ಅಭಿನಂದನೆಗಳನ್ನು ಅವರಿಗೇ ಸಲ್ಲಿಸುತ್ತೇನೆ.

† ಶ್ರೀಮತಿ ನಾಗಮ್ಮ ಕೇಶವಮೂರ್ತಿ (ಉಪಾಧ್ಯಕ್ಷರು).—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿವರ್ಯರೇ, ವಿರೋಧ ಪಕ್ಷದ ನಾಯಕರೇ, ಮತ್ತು ಇತರೇ ಎಲ್ಲಾ ಪಕ್ಷಗಳ ನಾಯಕರೆ ಹಾಗೂ ನನ್ನ ಆತ್ಮೀಯ ಶಾಸಕ ಮಿತ್ರರೇ, ತಾಯಂದಿರು ಮತ್ತು ಸಭಾ ನಾಯಕರು ನನ್ನ ಮೇಲೆ ವಿಶ್ವಾಸವನ್ನು ಇಟ್ಟು ನನ್ನನ್ನು ಈ ಸಭೆಯ ಉಪಾಧ್ಯಕ್ಷಣಿಯನ್ನಾಗಿ ಅವಿರೋಧವಾಗಿ ಆಯ್ಕೆ ಮಾಡಿದ್ದಕ್ಕಾಗಿ ಮೊಟ್ಟ ಮೊದಲನೆಯದಾಗಿ ನಾನು ತಮ್ಮೆಲ್ಲರಿಗೂ ಮುಖಾಂತರವಾಗಿ ನಮ್ಮ ಸಭಾ ನಾಯಕರಿಗೆ ನನ್ನ ಹೃತ್ಪೂರ್ವಕವಾಗಿ ಅಭಿನಂದನೆಯನ್ನು ಸಲ್ಲಿಸುತ್ತಿದ್ದೇನೆ. ತಮ್ಮೆಲ್ಲರ ನಿರೀಕ್ಷೆಗಳಿಗೆ ತಕ್ಕಂತೆ, ತಮ್ಮೆಲ್ಲರ ಒಂದು ನಂಬಿಕೆಗೆ ಪಾತ್ರಳಾಗಿರುವ ನಾನು ಬಹಳ ನಿಷ್ಠೆಯಿಂದ ಮತ್ತು ಒಳ್ಳೆಯ ಸಾಂಪ್ರದಾಯಗಳು ಈ ಮನೆಯಲ್ಲಿ ಏನು ಇವೆ. ಅವನ್ನು ನಡೆಸಿಕೊಂಡು ಹೋಗಲು ಕಾರ್ಯ ನಿರ್ವಹಿಸಲು ಪ್ರಯತ್ನಿಸುತ್ತೇನೆ ಮತ್ತು ತಮ್ಮೆಲ್ಲರ ಸಹಾಯ ಸಹಕಾರವನ್ನು ಕೂಡ ಈ ದಿಶೆಯಲ್ಲಿ ನಿರೀಕ್ಷಿಸುತ್ತೇನೆ. I certainly try to come upto your expectations. ಎಂಬ ಮಾತನ್ನು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಮಾನ್ಯ ಸಭಾಧ್ಯಕ್ಷರೆ ಸಂಸದೀಯ ವ್ಯವಹಾರದಲ್ಲಿ ಪರಿತವರು, ನುರಿತವರು ಇದ್ದೀರಿ. ತಮ್ಮ ಒಂದು ನಾಯಕತ್ವದಲ್ಲಿ ನನಗೆ ಅಪಾರವಾದ ನಂಬಿಕೆ ಇದೆ ಮತ್ತು ಗೌರವ ಸಹ ಇದೆ. ತಮ್ಮ ಜೊತೆಯಲ್ಲಿ ಕೆಲಸ ಮಾಡತಕ್ಕಂತಹ ಒಂದು ಅವಕಾಶ ಸಿಕ್ಕಿರುವುದು ನನಗೆ ಸಂತೋಷದ ವಿಷಯ ಹಾಗೂ ಆನಂದ ತರಿದಿದೆ ಎಂದರೆ ತಪ್ಪಾಗಲಾರದು. ಈ ಸದನದ ಕಾರ್ಯ ಕಲಾಪಗಳ ಬಗ್ಗೆ ಯಾವುದೇ ಪಾತ್ರಕ್ಕೂ ತಮ್ಮ ಜೊತೆಯಲ್ಲಿ ಪಾಲುದಾರಳಾಗಿ ಕೆಲಸ ಮಾಡಲು ನಾನು ಯಾವಾಗಲೂ ಸಿದ್ಧಳಿದ್ದೇನೆ. ತಾವು Friend, Philosopher and guide ಎಂದು ಏನು ಹೇಳುತ್ತಾರೆ ಆ ರೀತಿಯಲ್ಲಿ ನಾನು ನಿಮ್ಮ ಜೊತೆಯಲ್ಲಿ ಕೆಲಸ ಮಾಡಲು ಇಚ್ಛಿಸುತ್ತೇನೆ.

ನನ್ನನ್ನು ಅವಿರೋಧವಾಗಿ ಆಯ್ಕೆ ಮಾಡಿದ್ದೂ ಅಲ್ಲದೆ ನನ್ನ ಬಗ್ಗೆ ಒಳ್ಳೆಯ ಮಾತನಾಡಿದ್ದೀರಿ ಆದ್ದರಿಂದ ತಮ್ಮೆಲ್ಲರಿಗೂ ನನ್ನ ಹೃತ್ಪೂರ್ವಕವಾದ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ Litrle effort and gods grace can brig cent percent result. ಎಂದು ಏನು ಹೇಳುತ್ತಾರೆ ಈ ಒಂದು ಮಾತಿನಲ್ಲಿ ಪೂರ್ಣ ನಂಬಿಕೆ ಇರುವವಳು ನಾನಾಗಿದ್ದೇನೆ. ಇದರಲ್ಲಿ ಸ್ವಾಮಿಯ ಕೃಪೆ ಸದಾ ಇರಲಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

SRI D. B. CHANDREGOWDA.—In honour of the Deputy Speaker's election I think we may adjourn the House upto 3.00 P.M. There is also BAC meeting. I may be permitted to speak after 3.15 P.M.

MR. SPEAKER.—That can be done.